रेलवे भर्ती बोर्ड / RAILWAY RECRUITMENT BOARDS
सीईएन - 04/2026 - जेई, डीएमएस, सीएमए - CEN - 04/2026 - JE, DMS, CMA

Test Date	27/10/2026
Test Time	4:30 PM - 6:00 PM
Subject / Exam Group	RRB JE DMS CMA CBT I

*** Note**
Correct Answer will carry 1 mark per Question.
Incorrect Answer will carry 1/3 Negative mark per Question.

1. Options shown in green color with a tick icon are correct.
2. Chosen option on the right of the question indicates the option selected by the candidate.

Section : **RRB JE DMS CMA CBT I**

Q.1 **ಭಾರತದಲ್ಲಿ ಬ್ರಿಟಿಷ್ ಅವರ "ಒಡೆದು ಆಳುವ" ನೀತಿಯು ಪ್ರಮುಖವಾಗಿ ಈ ಕೆಳಗಿನ ಯಾವ ಕಲ್ಪನೆಯನ್ನು ಆಧರಿಸಿದೆ?**

Ans
✗ 1. ಶಾಂತಿಯನ್ನು ಕಾಪಾಡಿಕೊಳ್ಳಲು ವಿವಿಧ ಸಮುದಾಯಗಳ ನಡುವೆ ಸಹಕಾರವನ್ನು ಬೆಳೆಸುವುದು ಅತ್ಯಗತ್ಯವಾಗಿತ್ತು

✓ 2. ಪರಿಣಾಮಕಾರಿ ಆಡಳಿತಕ್ಕೆ ಮೊದಲೇ ಅಸ್ತಿತ್ವದಲ್ಲಿರುವ, ಕಠಿಣ ಧಾರ್ಮಿಕ ಮತ್ತು ಜಾತಿ ಗುರುತುಗಳನ್ನು ಗುರುತಿಸುವುದು ಮತ್ತು ಗಟ್ಟಿಗೊಳಿಸುವುದು ಪ್ರಮುಖವಾಗಿತ್ತು

✗ 3.
ವೈವಿಧ್ಯಮಯ ಜನಸಂಖ್ಯೆಯನ್ನು ಆಳಲು ಏಕರೂಪ ನಾಗರಿಕ ಸಂಹಿತೆಯು ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ

✗ 4. ಭಾಷಾ ವೈವಿಧ್ಯತೆಯನ್ನು ಉತ್ತೇಜಿಸುವುದು ದೇಶದ ಆರ್ಥಿಕ ಅಭಿವೃದ್ಧಿಗೆ ಸಹಾಯ ಮಾಡುತ್ತದೆ

Q.2 **ಒಬ್ಬ ತಯಾರಕನು ತನ್ನ ಮಾರಾಟ ಬೆಲೆಯನ್ನು ಉತ್ಪಾದನಾ ವೆಚ್ಚದ ಮೇಲೆ 28% ಹೆಚ್ಚಿಸಿ ನಿಗದಿಪಡಿಸುತ್ತಾನೆ. ಒಂದು ವೇಳೆ ಉತ್ಪಾದನಾ ವೆಚ್ಚವು 25% ರಷ್ಟು ಹೆಚ್ಚಾದರೆ ಮತ್ತು ತಯಾರಕನು ತನ್ನ ಮಾರಾಟ ಬೆಲೆಯನ್ನು 25% ರಷ್ಟು ಹೆಚ್ಚಿಸಿದರೆ, ಆಗುವ ಶೇಕಡಾವಾರು ಲಾಭವನ್ನು ಕಂಡುಹಿಡಿಯಿರಿ.**

Ans
✗ 1. 31%

✗ 2. 27%

✗ 3. 25%

✓ 4. 28%

Q.3 **ಒಂದು ಬಲ್ಬ್‌ನ ಮೂಲಕ 1 ಆಂಪಿಯರ್ ವಿದ್ಯುತ್ ಪ್ರವಾಹವನ್ನು 10 ಸೆಕೆಂಡುಗಳ ಕಾಲ ಹರಿಸಲಾಗುತ್ತದೆ. ಸಮಯವನ್ನು ಅರ್ಧಕ್ಕೆ ಉಳಿಸಿಕೊಂಡು, ವಿದ್ಯುತ್ ಪ್ರವಾಹದ ಪ್ರಮಾಣವನ್ನು ದ್ವಿಗುಣಗೊಳಿಸಿದರೆ, ಆರಂಭಿಕ ಸಂದರ್ಭಕ್ಕೆ ಹೋಲಿಸಿದರೆ ಬಲ್ಬ್‌ನ ಫಿಲಮೆಂಟ್ ಮೂಲಕ ಎಷ್ಟು ವಿದ್ಯುತ್ ಆವೇಶವು ಹರಿದಿರುತ್ತದೆ?**

Ans
✗ 1. ಆರಂಭಿಕ ಸಂದರ್ಭಕ್ಕೆ ಸಮನಾದ ಆವೇಶ

✓ 2. ಆರಂಭಿಕ ಸಂದರ್ಭದ ಎರಡು ಪಟ್ಟು ಆವೇಶ

✗ 3. ಆರಂಭಿಕ ಸಂದರ್ಭದ ಸರಿಸುಮಾರು ಅರ್ಧದಷ್ಟು ಆವೇಶ

✗ 4. ಆರಂಭಿಕ ಸಂದರ್ಭದ ನಾಲ್ಕು ಪಟ್ಟು

Q.4 **ಒಬ್ಬ ವ್ಯಕ್ತಿಯು ಒಂದು ಬಂಡೆಯ ಬಳಿ ನಿಂತು ಚಪ್ಪಾಳೆ ತಟ್ಟುತ್ತಾನೆ ಮತ್ತು ಸ್ವಲ್ಪ ಸಮಯದ ನಂತರ ಆ ಧ್ವನಿಯನ್ನು ಮತ್ತೆ ಕೇಳುತ್ತಾನೆ. ಆ ಪುನರಾವರ್ತಿತ ಧ್ವನಿಯು ಪ್ರತಿಧ್ವನಿ ಎಂಬುದನ್ನು ಯಾವ ವೀಕ್ಷಣೆಯು ದೃಢಪಡಿಸುತ್ತದೆ?**

Ans
✗ 1. ಪ್ರತಿಫಲಿತ ಶಬ್ದವು ಮೂಲ ಶಬ್ದಕ್ಕಿಂತ ಹೆಚ್ಚು ಗಟ್ಟಿಯಾಗಿ ಕೇಳಿಸುತ್ತದೆ.

✗ 2. ಚಪ್ಪಾಳೆಯ ತಕ್ಷಣ ಯಾವುದೇ ವಿಳಂಬವಿಲ್ಲದೆ ಪ್ರತಿಫಲಿತ ಶಬ್ದವು ಕೇಳಿಸುತ್ತದೆ.

✓ 3. ಪ್ರತಿಫಲಿತ ಶಬ್ದವು ಗಮನಾರ್ಹ ವಿಳಂಬದ ನಂತರ ಕೇಳಿಸುತ್ತದೆ.

✗ 4. ಪ್ರತಿಫಲಿತ ಶಬ್ದವು ಚಪ್ಪಾಳೆಯ ಅದೇ ಕ್ಷಣದಲ್ಲಿ ಕೇಳುತ್ತದೆ.

Q.5 **ಭಾರತದಲ್ಲಿ ಸರ್ಕಾರಿ ವೆಚ್ಚಗಳ ಲೆಕ್ಕಪರಿಶೋಧನೆಗೆ ಯಾವ ಸಂಸ್ಥೆಯು ಜವಾಬ್ದಾರನಾಗಿದೆ?**

Ans

✗ 1. ಕೇಂದ್ರ ಲೋಕಸೇವಾ ಆಯೋಗ

✓ 2. ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕ

✗ 3. ಕೇಂದ್ರ ವಿಚಕ್ಷಣಾ ಆಯೋಗ

✗ 4. ಹಣಕಾಸು ಆಯೋಗ

Q.6 **ತಟಸ್ಥೀಕರಣ ಕ್ರಿಯೆಯ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಯು ಸರಿಯಾಗಿದೆ?**

Ans

✗ 1. ಅವು ಯಾವಾಗಲೂ ಆಮ್ಲಜನಕ ಮತ್ತು ನೀರು ಆಗಿರುತ್ತವೆ

✗ 2. ಅವುಗಳು ಯಾವಾಗಲೂ ಇಂಗಾಲದ ಡೈಆಕ್ಸೈಡ್ ಮತ್ತು ನೀರು ಆಗಿರುತ್ತವೆ

✗ 3. ಅವು ಯಾವಾಗಲೂ ಜಲಜನಕ ಅನಿಲ ಮತ್ತು ನೀರು ಆಗಿರುತ್ತವೆ

✓ 4. ಅವುಗಳು ಯಾವಾಗಲೂ ಲವಣ ಮತ್ತು ನೀರು ಆಗಿರುತ್ತವೆ

Q.7 **ಹೂಬಿಡುವ ಸಸ್ಯಗಳಲ್ಲಿ ಪರಾಗ ಕಣಗಳು ಶಲಾಕ್ರಾಗವನ್ನು ತಲುಪಿದ ನಂತರ ಈ ಕೆಳಗಿನ ಯಾವ ಘಟನೆ ಸಂಭವಿಸುತ್ತದೆ?**

Ans

✓ 1. ಫಲೀಕರಣವು ಅಂಡಾಣುವಿನ ಒಳಗೆ ನಡೆಯುತ್ತದೆ.

✗ 2. ಪರಾಗವು ನೇರವಾಗಿ ಬೀಜವಾಗಿ ಬೆಳೆಯುತ್ತದೆ.

✗ 3. ಅಂಡಾಶಯವು ಹೂವಾಗಿ ಬೆಳೆಯುತ್ತದೆ.

✗ 4. ಹೂವು ಮಕರಂದವನ್ನು ಉತ್ಪಾದಿಸುತ್ತದೆ.

Q.8 **ಸ್ತರಗೋಳದಲ್ಲಿ ಎತ್ತರವು ಹೆಚ್ಚಾದಂತೆ ತಾಪಮಾನವು ಏಕೆ ಹೆಚ್ಚಾಗುತ್ತದೆ?**

Ans

✗ 1.
ಗಾಳಿಯ ಲಂಬ ಮಿಶ್ರಣವು ಶಾಖವನ್ನು ಹೆಚ್ಚಿಸುತ್ತದೆ

✗ 2. ನೀರಾವಿಯ ಸಾಂದ್ರೀಕರಣವು ಶಾಖವನ್ನು ಬಿಡುಗಡೆ ಮಾಡುತ್ತದೆ

✗ 3.
ಭೂಮಿಯ ಮೇಲ್ಮೈ ಪದರವನ್ನು ನೇರವಾಗಿ ಬಿಸಿ ಮಾಡುತ್ತದೆ

✓ 4. ಓಝೋನ್ UV ಕಿರಣಗಳನ್ನು ಹೀರಿಕೊಳ್ಳುತ್ತದೆ ಮತ್ತು ಪದರವನ್ನು ಬಿಸಿ ಮಾಡುತ್ತದೆ

Q.9 **ಒಂದು ಪಕ್ಷಿಯು ವಿಶ್ರಾಂತ ಸ್ಥಿತಿಯಿಂದ ಹಾರಲು ಪ್ರಾರಂಭಿಸುತ್ತದೆ ಮತ್ತು 6 m/s ವೇಗವನ್ನು ತಲುಪುವವರೆಗೆ ತನ್ನ ರೆಕ್ಕೆಗಳನ್ನು ಬಡಿಯುತ್ತಾ ಹಾರುತ್ತದೆ. ಪಕ್ಷಿಯು ಚಲನ ಶಕ್ತಿಯನ್ನು ಹೇಗೆ ಪಡೆಯುತ್ತದೆ ಎಂಬುದನ್ನು ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?**

Ans

✗ 1. ಹಾರಾಟದ ಸಮಯದಲ್ಲಿ ರೆಕ್ಕೆಗಳು ನಿರಂತರವಾಗಿ ಶಕ್ತಿಯನ್ನು ವರ್ಗಾಯಿಸುತ್ತದೆ

✗ 2. ಗಾಳಿಯ ಪ್ರತಿರೋಧವು ಪಕ್ಷಿಗಳ ಚಲನ ಶಕ್ತಿಯನ್ನು ಹೆಚ್ಚಿಸುತ್ತದೆ

✗ 3. ಯಾವುದೇ ಶಕ್ತಿಯ ಪರಿವರ್ತನೆಯಿಲ್ಲದೆ ಚಲನ ಶಕ್ತಿಯು ಉತ್ಪತ್ತಿಯಾಗುತ್ತದೆ

✓ 4. ಪಕ್ಷಿಯ ಸ್ನಾಯುಗಳು ಸಂಗ್ರಹವಾಗಿರುವ ರಾಸಾಯನಿಕ ಶಕ್ತಿಯನ್ನು ಚಲನ ಶಕ್ತಿಯಾಗಿ ಪರಿವರ್ತಿಸುತ್ತವೆ

Q.10 **ಸಂಖ್ಯೆ 252 ಎಂಬುದು ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ ಸಂಖ್ಯೆ 28 ಕ್ಕೆ ಸಂಬಂಧಿಸಿದೆ. ಅದೇ ತರ್ಕದಂತೆ ಸಂಖ್ಯೆ 306, ಸಂಖ್ಯೆ 34 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿದರೆ ಸಂಖ್ಯೆ 270 ಈ ಕೆಳಗಿನ ಯಾವ ಆಯ್ಕೆಗೆ ಸಂಬಂಧಿಸಿದೆ?**

(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಿರ್ವಹಿಸಬೇಕು. ಉದಾ: 13 ಅನ್ನು ತೆಗೆದುಕೊಳ್ಳೋಣ. 13ಕ್ಕೆ ಕೂಡಿಸುವುದು/ಕಳೆಯುವುದು/ಗುಣಿಸುವುದು ಇತ್ಯಾದಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಲು ಅವಕಾಶವಿಲ್ಲ.

Ans

✗ 1. 32

✗ 2. 37

✗ 3. 35

✓ 4. 30

Q.11 ಭಾರತದ ಅತ್ಯಂತ ಹಳೆಯ ಕಬ್ಬಿಣ ಮತ್ತು ಉಕ್ಕಿನ ಸ್ವಾವರವಾದ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಂಪನಿ (TISCO) ಅನ್ನು 1907 ರಲ್ಲಿ ಯಾವ ನಗರದಲ್ಲಿ ಸುಬರ್ಣರೇಖಾ ಮತ್ತು ಖಾರ್ಕೈ ನದಿಗಳ ಸಂಗಮಸ್ಥಾನದಲ್ಲಿ ಸ್ಥಾಪಿಸಲಾಯಿತು?

Ans
✗ 1. ದುರ್ಗಾಪುರ
✓ 2. ಜಮ್ಶೆಡ್‌ಪುರ
✗ 3. ಭಿಲಾಯಿ
✗ 4. ರೂರ್ಕೆಲಾ

Q.12 ಈ ಕೆಳಗಿನವುಗಳಲ್ಲಿ ಯಾವುದರ ಶುದ್ಧೀಕರಣಕ್ಕಾಗಿ ವಿದ್ಯುದ್ವಿಭಜನೆಯ ಸಂಸ್ಕರಣೆಯನ್ನು ಬಳಸಲಾಗುತ್ತದೆ?

Ans
✗ 1. ಮಿಶ್ರಲೋಹಗಳು
✗ 2. ಸಕ್ಕರೆ
✗ 3. ಅಲೋಹಗಳು
✓ 4. ಲೋಹಗಳು

Q.13 ಗೀತಾಂಜಲಿ ಅವರು ಮೂರು ಸಮಾನ ದೂರಗಳನ್ನು ಅನುಕ್ರಮವಾಗಿ 50 km/h, 60 km/h ಮತ್ತು 80 km/h ಜವಗಳಲ್ಲಿ (speed) ಕ್ರಮಿಸುತ್ತಾರೆ. ಪ್ರಯಾಣದ ಸರಾಸರಿ ಜವವನ್ನು ಲೆಕ್ಕ ಹಾಕಿ. ನಿಮ್ಮ ಉತ್ತರವನ್ನು ಎರಡು ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ಸೀಮಿತಗೊಳಿಸಿ ಬರೆಯಿರಿ.

Ans
✗ 1. 62.01 km/h
✓ 2. 61.02 km/h
✗ 3. 65.02 km/h
✗ 4. 64.23 km/h

Q.14 ದುಗ್ಧರಸದ ಕುರಿತಂತೆ ಯಾವ ಹೇಳಿಕೆಯು ಸರಿಯಾಗಿದೆ?

Ans
✗ 1. ದುಗ್ಧರಸವು ಮುಖ್ಯವಾಗಿ ಕಿರುತಟ್ಟೆ (platelet) ಗಳಿಂದ ಮಾಡಲ್ಪಟ್ಟಿದೆ
✓ 2. ದುಗ್ಧರಸವು ಪ್ಲಾಸ್ಮಾಕ್ಕಿಂತ ಕಡಿಮೆ ಪ್ರೋಟೀನ್ ಅನ್ನು ಹೊಂದಿದ್ದು ಇದು ಬಣ್ಣರಹಿತವಾಗಿರುತ್ತದೆ
✗ 3. ದುಗ್ಧರಸವು ಪ್ಲಾಸ್ಮಾಕ್ಕಿಂತ ಹೆಚ್ಚಿನ ಕೆಂಪು ರಕ್ತಕಣಗಳನ್ನು ಹೊಂದಿರುತ್ತದೆ
✗ 4. ದುಗ್ಧರಸವು ರಕ್ತದ ಪ್ಲಾಸ್ಮಾಕ್ಕಿಂತ ಹೆಚ್ಚಿನ ಪ್ರೋಟೀನ್ ಅನ್ನು ಹೊಂದಿರುತ್ತದೆ

Q.15 ಬೋರ್ ಅವರ ಪರಮಾಣು ಮಾದರಿಯ ಪ್ರಕಾರ, ಕ್ಯಾಲ್ಸಿಯಂ ಪರಮಾಣುವಿನ ಎಲೆಕ್ಟ್ರಾನಿಕ್ ಸಂರಚನೆ (ಪರಮಾಣು ಸಂಖ್ಯೆ 20) _____ ಆಗಿರುತ್ತದೆ.

Ans
✓ 1. 2 , 8 , 8 , 2
✗ 2. 2 , 8 , 2 , 8
✗ 3. 2 , 2 , 8 , 8
✗ 4. 2 , 8 , 10

Q.16 ಒಂದು ವೇಳೆ ಭೂಮಿಯ ವಾತಾವರಣವು ಇಲ್ಲದಿದ್ದರೆ, ಈ ಕೆಳಗಿನ ಯಾವ ವಿದ್ಯಮಾನವನ್ನು ವೀಕ್ಷಿಸಲು ಸಾಧ್ಯವಾಗುವುದಿಲ್ಲ?

Ans
✗ 1. ಚಂದ್ರನ ದೃಶ್ಯಭಾಗಗಳು
✗ 2. ಸೂರ್ಯಗ್ರಹಣದ ಸಂಭವಿಸುವಿಕೆ
✓ 3. ಮುಂಚಿತ ಸೂರ್ಯೋದಯ ಮತ್ತು ವಿಳಂಬಿತ ಸೂರ್ಯಾಸ್ತ
✗ 4. ಸೂರ್ಯನ ದೈನಂದಿನ ಚಲನೆ

Q.17 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ,
A # B ಎಂದರೆ 'A ಯು B ಯ ಮಗಳು',
A $ B ಎಂದರೆ 'A ಯು B ಯ ತಾಯಿ',
A & B ಎಂದರೆ 'A ಯು B ಯ ಹೆಂಡತಿ', ಮತ್ತು
A % B ಎಂದರೆ ' A ಯು B ಯ ತಂದೆ'.

ಮೇಲಿನದನ್ನು ಆಧರಿಸಿ, ಒಂದು ವೇಳೆ 'F#T$O%Q&Z' ಆಗಿದ್ದರೆ, F ಅವರು Z ಅವರಿಗೆ ಹೇಗೆ ಸಂಬಂಧಿ?

Ans
✗ 1. ಹೆಂಡತಿ
✗ 2. ಹೆಂಡತಿಯ ತಂದೆಯ ತಾಯಿ
✓ 3. ಹೆಂಡತಿಯ ತಂದೆಯ ಸಹೋದರಿ
✗ 4. ತಾಯಿ

Q.18 ಒಬ್ಬ ಎಂಜಿನಿಯರ್ ಕಸ್ಟಮ್-ಬಿಲ್ಟ್ ಬಂಡಿಯನ್ನು 12 ಒಂದೇ ರೀತಿಯ ಪ್ಯಾಕೇಜ್‌ಗಳೊಂದಿಗೆ ತುಂಬಿಸಿ ಒಂದು ಗೋದಾಮಿನ ನಯವಾದ ನೆಲದ ಮೇಲೆ ಬಿಡುವ ಮೂಲಕ ಪರೀಕ್ಷಿಸುತ್ತಾರೆ. ಪ್ಯಾಕೇಜ್‌ಗಳೊಂದಿಗೆ ಬಂಡಿಯು ಒಟ್ಟು 36 ನ್ಯೂಟನ್‌ಗಳ ಬಲದೊಂದಿಗೆ ತಳ್ಳಿದಾಗ ಪ್ರತಿ ಸೆಕೆಂಡಿಗೆ 0.5 ಮೀಟರ್‌ಗಳಷ್ಟು ವೇಗೋತ್ಕರ್ಷಗೊಂಡರೆ, ದ್ರವ್ಯರಾಶಿ ಬದಲಾಯಿಸದೆ ಪ್ರಯೋಗಿಸಲಾದ ಬಲವನ್ನು ದ್ವಿಗುಣಗೊಳಿಸಿದರೆ ಹೊಸ ವೇಗೋತ್ಕರ್ಷವು ಏನಾಗುತ್ತದೆ?

Ans
✗ 1. ಆರಂಭಿಕ ಮೌಲ್ಯಕ್ಕೆ ಹೋಲಿಸಿದರೆ ವೇಗೋತ್ಕರ್ಷವು ಅರ್ಧದಷ್ಟು ಆಗುತ್ತದೆ
✓ 2. ಆರಂಭಿಕ ಮೌಲ್ಯಕ್ಕೆ ಹೋಲಿಸಿದರೆ ವೇಗೋತ್ಕರ್ಷವು ದ್ವಿಗುಣಗೊಳ್ಳುತ್ತದೆ
✗ 3. ವೇಗೋತ್ಕರ್ಷವು ಆರಂಭಿಕ ಮೌಲ್ಯದಷ್ಟೇ ಇರುತ್ತದೆ
✗ 4. ವೇಗೋತ್ಕರ್ಷವು ಒಂದು ಸ್ಥಿರ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ

Q.19 ಒಂದು ಶಬ್ದ ತರಂಗವು ಸಮುದ್ರದ ನೀರಿನ ಮೂಲಕ 1500 m/s ವೇಗದಲ್ಲಿ ಚಲಿಸುತ್ತದೆ. ಒಂದು ವೇಳೆ ಅದರ ತರಂಗಾಂತರವು 2.5 m ಆಗಿದ್ದರೆ, ಅದರ ಆವರ್ತನ ಎಷ್ಟು?

Ans
✗ 1. 750 Hz
✗ 2. 150 Hz
✗ 3. 1200 Hz
✓ 4. 600 Hz

Q.20 ರಾಮನ್ ಅವರ ಮಾಸಿಕ ಆದಾಯವು ₹21,000 ಆಗಿದೆ. ಅವರು ತಮ್ಮ ಆದಾಯದಲ್ಲಿ 19% ಅನ್ನು ಉಳಿತಾಯ ಮಾಡುತ್ತಾರೆ. ಒಂದು ವೇಳೆ ಅವರ ಆದಾಯವು 14% ದಷ್ಟು ಹೆಚ್ಚಾದರೆ ಮತ್ತು ಅವರ ವೆಚ್ಚವು 20% ದಷ್ಟು ಹೆಚ್ಚಾದರೆ, ಅವರ ಉಳಿತಾಯವು ಇಷ್ಟಿರುತ್ತದೆ:

Ans
✗ 1. ₹458 ರಷ್ಟು ಹೆಚ್ಚಳವಾಗುತ್ತದೆ
✗ 2. ₹457 ರಷ್ಟು ಕಡಿಮೆಯಾಗುತ್ತದೆ
✓ 3. ₹462 ರಷ್ಟು ಕಡಿಮೆಯಾಗುತ್ತದೆ
✗ 4. ₹459 ರಷ್ಟು ಹೆಚ್ಚಳವಾಗುತ್ತದೆ

Q.21 ಒಂದು ವಸ್ತುವನ್ನು ಅದರ ಅಸಲು ಬೆಲೆಯ ಮೇಲೆ 122% ಲಾಭಕ್ಕೆ ಮಾರಾಟ ಮಾಡಲಾಗುತ್ತದೆ. ಒಂದು ವೇಳೆ ಅಸಲು ಬೆಲೆ ಮತ್ತು ಮಾರಾಟ ಬೆಲೆಯನ್ನು ಅದಲು ಬದಲು ಮಾಡಿದರೆ, ವಹಿವಾಟಿನಲ್ಲಿ ಆಗುವ ಶೇಕಡಾವಾರು ನಷ್ಟ ಎಷ್ಟು? ನಿಮ್ಮ ಉತ್ತರವನ್ನು ಎರಡು ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ.

Ans
✓ 1. 54.95%
✗ 2. 56.03%
✗ 3. 54.49%
✗ 4. 57.53%

Q.22 ಲೋಹಗಳ ಭೌತಿಕ ಗುಣಲಕ್ಷಣಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಯು ಸರಿಯಾಗಿದೆ?

Ans
✗ 1. ಎಲ್ಲಾ ಲೋಹಗಳು ಗಟ್ಟಿಯಾಗಿರುತ್ತವೆ ಮತ್ತು ಅವುಗಳನ್ನು ಚಾಕುವಿನಿಂದ ಕತ್ತರಿಸಲಾಗುವುದಿಲ್ಲ
✓ 2. ಒಂದು ಲೋಹವನ್ನು ಹೊಡೆದಾಗ ಅದು ಕಂಪಿಸುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಅದರ ಅನುರಣನ ಗುಣವು ಕಂಡುಬರುತ್ತದೆ
✗ 3. ಎಲ್ಲಾ ಲೋಹಗಳು ಸಮಾನವಾಗಿ ಉತ್ತಮ ವಿದ್ಯುತ್ ವಾಹಕಗಳಾಗಿರುತ್ತವೆ
✗ 4. ಕೋಣೆಯ ಉಷ್ಣಾಂಶದಲ್ಲಿ ಘನವಾಗಿರುವ ಏಕೈಕ ಲೋಹವೆಂದರೆ ಅದು ಪಾದರಸ.

Q.23 ಈ ಕೆಳಗೆ ನೀಡಲಾದ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆಯ್ಕೆ ಮಾಡಿ. ಈ ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

BKP : EMM
JLQ : MNN

Ans
✗ 1. BPN : ESK
✗ 2. INX : LPV
✗ 3. KXL : NYI
✓ 4. QDJ : TFG

Q.24 ಕ್ಲೋರಿನ್‌ನೊಂದಿಗೆ ಸೋಡಿಯಂ ಪರಮಾಣು ವರ್ತಿಸಿದಾಗ ಧನ ಅಯಾನು ರೂಪುಗೊಳ್ಳುವುದೇಕೆ ಎಂಬುದನ್ನು ಈ ಕೆಳಗಿನ ಯಾವುದು ಉತ್ತಮವಾಗಿ ವಿವರಿಸುತ್ತದೆ?

Ans
✓ 1. ಸೋಡಿಯಂ ಪರಮಾಣು ಸ್ಥಿರ ಎಲೆಕ್ಟ್ರಾನಿಕ್ ಸಂರಚನೆಯನ್ನು ಸಾಧಿಸಲು ಒಂದು ಎಲೆಕ್ಟ್ರಾನ್ ಅನ್ನು ಕಳೆದುಕೊಳ್ಳುತ್ತದೆ
✗ 2. ಸೋಡಿಯಂ ಪರಮಾಣು ಕ್ಲೋರಿನ್‌ನೊಂದಿಗೆ ಎಲೆಕ್ಟ್ರಾನ್‌ಗಳನ್ನು ಸಮಾನವಾಗಿ ಹಂಚಿಕೊಂಡು ಬಂಧವನ್ನು ರೂಪಿಸುತ್ತದೆ
✗ 3. ಸೋಡಿಯಂ ಪರಮಾಣು ತನ್ನ ಎಲ್ಲಾ ಎಲೆಕ್ಟ್ರಾನ್‌ಗಳನ್ನು ವಿದ್ಯುತ್ ತಟಸ್ಥವಾಗಿ ಉಳಿಸಿಕೊಳ್ಳುತ್ತದೆ
✗ 4. ಸೋಡಿಯಂ ಪರಮಾಣು ತನ್ನ ಹೊರಗಿನ ಕವಚವನ್ನು ಪೂರ್ಣಗೊಳಿಸಲು ಒಂದು ಎಲೆಕ್ಟ್ರಾನ್ ಅನ್ನು ಪಡೆದುಕೊಳ್ಳುತ್ತದೆ

Q.25 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛ ಜೋಡಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಜೋಡಿ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ-ಗುಚ್ಛದಲ್ಲಿನ ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅವುಗಳ ಸ್ಥಾನಗಳನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ.)

Ans
✗ 1. XT–SO
✓ 2. NJ–HG
✗ 3. AW–VR
✗ 4. SO–NJ

Q.26 ಒಂದು ಸಮಬಾಹು ತ್ರಿಭುಜದ ವಿಸ್ತೀರ್ಣವು $4\sqrt{3}\ \text{cm}^2$ ಆಗಿದೆ. ತ್ರಿಭುಜದ ಪರಿವೃತ್ತದ (cm ಗಳಲ್ಲಿ) ವ್ಯಾಸ ಎಷ್ಟು?

Ans
✗ 1. $\frac{\sqrt{3}}{3}$
✗ 2. $\frac{4\sqrt{3}}{3}$
✗ 3. $\frac{2\sqrt{3}}{3}$
✓ 4. $\frac{8\sqrt{3}}{3}$

Q.27 EXTERNALITY ಎಂಬ ಪದದಲ್ಲಿನ ಪ್ರತಿಯೊಂದು ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಬರುವ ಅದರ ಮುಂದಿನ ಎರಡನೇ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿಯೊಂದು ವ್ಯಂಜನಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಬರುವ ಅದರ ತಕ್ಷಣದ ಹಿಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಅಕ್ಷರಗಳ ಗುಂಪಿನಲ್ಲಿ ಎಷ್ಟು ಅಕ್ಷರಗಳು ನಿಖರವಾಗಿ ಎರಡು ಬಾರಿ ಕಾಣಿಸಿಕೊಳ್ಳುತ್ತವೆ?

Ans
✓ 1. ಮೂರು
✗ 2. ನಾಲ್ಕು
✗ 3. ಒಂದು
✗ 4. ಎರಡು

Q.28 ಒಂದುವೇಳೆ 2531647 ಎಂಬ ಸಂಖ್ಯೆಯಲ್ಲಿನ ಪ್ರತಿಯೊಂದು ಸಮ ಅಂಕಿಗೆ 3 ಅನ್ನು ಕೂಡಿಸಿದರೆ ಮತ್ತು ಪ್ರತಿಯೊಂದು ಬೆಸ ಅಂಕಿಗೆ 2 ಅನ್ನು ಕೂಡಿಸಿದರೆ, ಹೀಗೆ ರೂಪುಗೊಂಡ ಸಂಖ್ಯೆಯಲ್ಲಿ ಮೊದಲ ಸ್ಥಾನ ಮತ್ತು ಕೊನೆಯ ಸ್ಥಾನದಲ್ಲಿರುವ ಅಂಕಿಗಳ ಮೊತ್ತ ಎಷ್ಟು?

Ans
✗ 1. 12
✓ 2. 14
✗ 3. 16
✗ 4. 18

Q.29 X ಮತ್ತು Y ಎಂಬ ಇಬ್ಬರು ಸ್ನೇಹಿತರು ಕ್ರಮವಾಗಿ ₹160 ಮತ್ತು ₹230 ಆರಂಭಿಕ ಬಂಡವಾಳ ಹೂಡಿ ಒಂದು ವ್ಯಾಪಾರವನ್ನು ಪ್ರಾರಂಭಿಸಿದರು. ಒಂದು ವರ್ಷದ ಕೊನೆಗೆ, ಆ ವ್ಯಾಪಾರವು ಒಟ್ಟು ₹54,951 ಲಾಭವನ್ನು ಗಳಿಸಿತು. ಹಾಗಾದರೆ ಆ ಲಾಭದಲ್ಲಿ X ನ ಪಾಲು (₹ ಗಳಲ್ಲಿ) ಎಷ್ಟು?

Ans
✗ 1. ₹22,549
✓ 2. ₹22,544
✗ 3. ₹22,551
✗ 4. ₹22,560

Q.30 ಶುದ್ಧ ವೀರ್ಯ ಉತ್ಪಾದನೆಗೆ ಅತ್ಯಗತ್ಯವಾಗಿರುವ ವೃಷಣಗಳ ಉಷ್ಣಾಂಶವನ್ನು ದೇಹದ ಸಾಮಾನ್ಯ ಉಷ್ಣಾಂಶಕ್ಕಿಂತ ____ ಇರುವಂತೆ ಕಾಯ್ದುಕೊಳ್ಳಲು ವೃಷಣಕೋಶ (scrotum) ಸಹಾಯ ಮಾಡುತ್ತದೆ.

Ans
✗ 1. ಏರಿಳಿತದಲ್ಲಿ
✓ 2. ಕಡಿಮೆ
✗ 3. ಸಮಾನ
✗ 4. ಹೆಚ್ಚು

Q.31 ಈ ಕೆಳಗಿನ ಯಾವ ಚಳುವಳಿಯು "ಮಾಡು ಇಲ್ಲವೇ ಮಡಿ" ಎಂಬ ಘೋಷಣೆಗೆ ಸಂಬಂಧಿಸಿದೆ?

Ans
✗ 1. ಅಸಹಕಾರ ಚಳವಳಿ
✗ 2. ಖಿಲಾಫತ್ ಚಳವಳಿ
✓ 3. ಕ್ವಿಟ್ ಇಂಡಿಯಾ ಚಳವಳಿ
✗ 4. ಕಾನೂನು ಭಂಗ ಚಳವಳಿ

Q.32 ಒಂದು ಪಟ್ಟಣದ ಪ್ರಸ್ತುತ ಜನಸಂಖ್ಯೆಯು 16,000 ಆಗಿದೆ. ಇದು ಮೊದಲ ವರ್ಷದಲ್ಲಿ 40% ದಷ್ಟು ಹೆಚ್ಚಾಗುತ್ತದೆ ಮತ್ತು ಎರಡನೇ ವರ್ಷದಲ್ಲಿ 50% ದಷ್ಟು ಹೆಚ್ಚಾಗುತ್ತದೆ. ಆದರೆ ಮೂರನೇ ವರ್ಷದಲ್ಲಿ 35% ದಷ್ಟು ಕಡಿಮೆಯಾಗುತ್ತದೆ. ಹಾಗಾದರೆ ಮೂರನೇ ವರ್ಷದ ಕೊನೆಯಲ್ಲಿ ಆ ಪಟ್ಟಣದ ಜನಸಂಖ್ಯೆ ಎಷ್ಟು?

Ans
✓ 1. 21,840
✗ 2. 23,100
✗ 3. 19,320
✗ 4. 20,580

Q.33 ಈ ಪ್ರಶ್ನೆಯು ಈ ಕೆಳಗಿನ ಪದಗಳನ್ನು ಆಧರಿಸಿದೆ:

DIM PIN URN OWL

ಬಲದಿಂದ ಎರಡನೇ ಪದದ ಮೊದಲನೇ ಅಕ್ಷರ ಮತ್ತು ಎಡದಿಂದ ಮೊದಲನೇ ಪದದ ಎರಡನೇ ಅಕ್ಷರದ ನಡುವೆ ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans
✗ 1. 10
✓ 2. 11
✗ 3. 12
✗ 4. 14

Q.34 ಯಾವ ಲೋಹವು HCl ನೊಂದಿಗೆ ವರ್ತಿಸುವಾಗ ಅತ್ಯಂತ ಕಡಿಮೆ ಕ್ರಿಯಾಶೀಲವಾಗಿರುತ್ತದೆ?

Ans
✗ 1. ಸತು
✓ 2. ಕಬ್ಬಿಣ
✗ 3. ಮೆಗ್ನೀಸಿಯಮ್
✗ 4. ಅಲ್ಯೂಮಿನಿಯಂ

Black

Q.35 $\{(5 + 3)^2 - (4 \times 2)\} \div 4 \times 2 + 3$ ಇದರ ಮೌಲ್ಯವೆಷ್ಟು?

Ans
- ✗ 1. 33
- ✓ 2. 31
- ✗ 3. 30
- ✗ 4. 34

Q.36 ಬಯೋಮೆಡಿಕಲ್ ಎಂಜಿನಿಯರ್ ಒಬ್ಬರು ಇಮೇಜಿಂಗ್ ಚೇಂಬರ್ ನಲ್ಲಿ ಏಕರೂಪದ ಕಾಂತ ಕ್ಷೇತ್ರವನ್ನು ಉತ್ಪಾದಿಸಲು ಸೊಲೆನಾಯ್ಡ್ ಅನ್ನು ಬಳಸುವ MRI ಯಂತ್ರವನ್ನು ವಿನ್ಯಾಸಗೊಳಿಸುತ್ತಿದ್ದಾರೆ. ಪ್ರವಾಹವನ್ನು ಬದಲಾಯಿಸದೆ ಕ್ಷೇತ್ರದ ಬಲವನ್ನು ಹೆಚ್ಚಿಸಲು, ಸೊಲೆನಾಯ್ಡ್‌ನ ವಿನ್ಯಾಸವನ್ನು ಬದಲಾಯಿಸುವ ಬಗ್ಗೆ ಅವರು ಯೋಚಿಸುತ್ತಾರೆ. ಚೇಂಬರ್ ಗಾತ್ರವನ್ನು ಸ್ಥಿರವಾಗಿರಿಸಿಕೊಂಡು ಯಾವ ಮಾರ್ಪಾಡು ಚೇಂಬರ್ ಒಳಗಿನ ಕ್ಷೇತ್ರವನ್ನು ಹೆಚ್ಚು ಪರಿಣಾಮಕಾರಿಯಾಗಿ ಹೆಚ್ಚಿಸುತ್ತದೆ?

Ans
- ✗ 1. ಸೊಲೆನಾಯ್ಡ್ ಒಳಗೆ ಕಾಂತೀಯವಲ್ಲದ (ಉದಾ. ಪ್ಲಾಸ್ಟಿಕ್) ಕೋರ್ ಅನ್ನು ಇಡುವುದು
- ✗ 2. ಸೊಲೆನಾಯ್ಡ್ ಒಳಗೆ ಸುರುಳಿಯನ್ನು ಸುತ್ತಲು ದಪ್ಪವಾದ ತಂತಿಯನ್ನು ಬಳಸುವುದು
- ✗ 3. ಅದೇ ಚೇಂಬರ್ ಒಳಗೆ ಸೊಲೆನಾಯ್ಡ್‌ನ ತಿರುವನ್ನು ಹೆಚ್ಚು ದೂರದಲ್ಲಿ ಇಡುವುದು
- ✓ 4. ಸೊಲೆನಾಯ್ಡ್‌ನ ಪ್ರತಿ ಯೂನಿಟ್ ಉದ್ದಕ್ಕೆ ಬಿಗಿಯಾಗಿ ಸುತ್ತುವ ತಿರುವುಗಳ ಸಂಖ್ಯೆಯನ್ನು ಹೆಚ್ಚಿಸುವುದು

Q.37 ಗಾಳಿಯಿಂದ ನೀರನ್ನು ಪ್ರವೇಶಿಸುವಾಗ ಬೆಳಕು ಲಂಬದ ಕಡೆಗೆ ಬಾಗುವುದನ್ನು ಒಬ್ಬ ವಿದ್ಯಾರ್ಥಿಯು ಗಮನಿಸುತ್ತಾನೆ. ಗಾಳಿಗೆ ಹೋಲಿಸಿದರೆ ನೀರಿನ ವಕ್ರೀಭವನ ಸೂಚ್ಯಂಕದ ಬಗ್ಗೆ ಇದು ಏನನ್ನು ಸೂಚಿಸುತ್ತದೆ?

Ans
- ✓ 1. ನೀರು ಗಾಳಿಗಿಂತ ಹೆಚ್ಚಿನ ವಕ್ರೀಭವನ ಸೂಚ್ಯಂಕವನ್ನು ಹೊಂದಿರುತ್ತದೆ
- ✗ 2. ನೀರು ಗಾಳಿಗಿಂತ ಕಡಿಮೆ ವಕ್ರೀಭವನ ಸೂಚ್ಯಂಕವನ್ನು ಹೊಂದಿರುತ್ತದೆ
- ✗ 3. ನೀರು ಮತ್ತು ಗಾಳಿಯು ಸಮಾನ ವಕ್ರೀಭವನ ಸೂಚ್ಯಂಕಗಳನ್ನು ಹೊಂದಿರುತ್ತವೆ
- ✗ 4. ನೀರಿನ ವಕ್ರೀಭವನ ಸೂಚ್ಯಂಕವು ಬೆಳಕಿನ ತರಂಗದೂರವನ್ನು ಮಾತ್ರ ಅವಲಂಬಿಸಿರುತ್ತದೆ

Q.38 ಇಂಗಾಲದ ಈ ಕೆಳಗಿನ ಯಾವ ಭಿನ್ನರೂಪಿಯು (ಅಲೋಟ್ರೋಪ್) ವಿದ್ಯುತ್ ಅನ್ನು ಸಾಗಿಸುವುದಿಲ್ಲ?

Ans
- ✗ 1. ಫುಲ್ಲರೀನ್
- ✗ 2. ಗ್ರಾಫೈಟ್
- ✗ 3. ಇದ್ದಿಲು
- ✓ 4. ವಜ್ರ

Q.39 ಒಂದು ಮಿತ ಅಸಮರೂಪಿ ಗುಂಪು ದತ್ತಾಂಶ ವಿತರಣೆಗೆ, ಮಧ್ಯಾಂಕವು 35 ಆಗಿದೆ. ರೂಢಿಬೆಲೆ ಮತ್ತು ಸರಾಸರಿಯ ನಡುವಿನ ವ್ಯತ್ಯಾಸವು 12 ಆಗಿದೆ. ಒಂದು ವೇಳೆ ಸರಾಸರಿಯು ರೂಢಿಬೆಲೆಗಿಂತ ಹೆಚ್ಚಿದ್ದರೆ, ಸರಾಸರಿಯ ಮೌಲ್ಯವನ್ನು ಕಂಡುಹಿಡಿಯಿರಿ. (ಸರಾಸರಿ, ಮಧ್ಯಾಂಕ ಮತ್ತು ರೂಢಿಬೆಲೆಯ ನಡುವಿನ ಪ್ರಾಯೋಗಿಕ ಸಂಬಂಧವನ್ನು ಬಳಸಿ)

Ans
- ✗ 1. 38
- ✓ 2. 39
- ✗ 3. 40
- ✗ 4. 41

Q.40 ಅರಣ್ಯನಾಶದ ವಿರುದ್ಧದ ಜನಸಾಮಾನ್ಯರ ಉಪಕ್ರಮವಾದ ಚಿಪ್ಕೊ ಚಳುವಳಿಯು, ಗ್ರಾಮಸ್ಥರು ಮರಗಳನ್ನು ಕಡಿಯುವುದನ್ನು ತಡೆಯಲು ಮರಗಳನ್ನು ಅಪ್ಪಿಕೊಳ್ಳುವುದನ್ನು ಒಳಗೊಂಡಿದ್ದು, ಪ್ರಸ್ತುತ ಯಾವ ರಾಜ್ಯದಲ್ಲಿ ಹುಟ್ಟಿಕೊಂಡಿತು?

Ans
- ✗ 1. ಹಿಮಾಚಲ ಪ್ರದೇಶ
- ✓ 2. ಉತ್ತರಾಖಂಡ
- ✗ 3. ಜಾರ್ಖಂಡ್
- ✗ 4. ಸಿಕ್ಕಿಂ

Q.41 ಎರಡು ಪಾತ್ರೆಗಳಲ್ಲಿ ಬೇರೆ ಬೇರೆ ಸಾಂದ್ರತೆಗಳುಳ್ಳ ಎರಡು ಬಗೆಯ ಕೆಂಪು ಬಣ್ಣಗಳಿವೆ: ಒಂದು ಬಣ್ಣವು 30% ಸಾಂದ್ರತೆ ಹೊಂದಿದೆ ಮತ್ತು ಇನ್ನೊಂದು ಬಣ್ಣವು 50% ಸಾಂದ್ರತೆ ಹೊಂದಿದೆ. ಒಂದುವೇಳೆ 4 ಲೀಟರ್ ನಷ್ಟು ಮೊದಲನೆಯ ಬಣ್ಣ ಮತ್ತು 6 ಲೀಟರ್ ನಷ್ಟು ಎರಡನೆಯ ಬಣ್ಣಗಳನ್ನು ಬೆರೆಸಿದರೆ, ಆ ಮಿಶ್ರಣದ ಕೆಂಪು ಬಣ್ಣದ ಶೇಕಡಾವಾರು ಪ್ರಮಾಣ ಎಷ್ಟಾಗುತ್ತದೆ?

Ans
- ✗ 1. 50%
- ✗ 2. 40%
- ✗ 3. 44%
- ✓ 4. 42%

Q.42 ಕಶೇರುಕಗಳಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಕಶೇರುಸ್ತಂಭದ ಮುಖ್ಯ ಕಾರ್ಯವಾಗಿದೆ?

Ans
- ✗ 1. ಆಹಾರವನ್ನು ವಿಭಜಿಸಲು ಜೀರ್ಣಕಾರಿ ದ್ರವಗಳನ್ನು ಸ್ರವಿಸುವುದು
- ✗ 2. ಆಮ್ಲಜನಕದಿಂದ ಕೂಡಿದ ರಕ್ತವನ್ನು ಇಡೀ ದೇಹಕ್ಕೆ ಪಂಪ್ ಮಾಡುವುದು
- ✓ 3. ನರವ್ಯವಸ್ಥೆಯ ಬೆನ್ನುಹುರಿಯನ್ನು ರಕ್ಷಿಸುವುದು
- ✗ 4. ರಕ್ತದಿಂದ ಸಾರಜನಕಯುಕ್ತ ವಿಷಕಾರಿ ತ್ಯಾಜ್ಯಗಳನ್ನು ಶೋಧಿಸುವುದು

Q.43 ಈ ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳ ನಂತರದ ಷರತ್ತುಗಳ ಪ್ರಕಾರ ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗುತ್ತದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯೇ ನಿಮ್ಮ ಉತ್ತರವಾಗಿದೆ.
ಸೂಚನೆ: ಒಂದುವೇಳೆ ಯಾವುದೇ ಷರತ್ತುಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿ ನೀಡಲಾದಂತೆ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನೇ ನೇರವಾಗಿ ಅನುಸರಿಸಬೇಕು.

ಸಂಖ್ಯೆ / ಚಿಹ್ನೆ 7 4 5 # @ & ? $ + %

ಸಂಕೇತ J P L C M Z T G F D

ಷರತ್ತುಗಳು:
(i) ಮೊದಲ ಅಂಶವು ಬೆಸ ಸಂಖ್ಯೆಯಾಗಿದ್ದರೆ, ಮೊದಲ ಮತ್ತು ಕೊನೆಯ ಅಂಶಗಳ ಸಂಕೇತಗಳನ್ನು ಪರಸ್ಪರ ಬದಲಾಯಿಸಬೇಕು.
(ii) ಎರಡನೇ ಮತ್ತು ಮೂರನೇ ಅಂಶಗಳು ಚಿಹ್ನೆಗಳಾಗಿದ್ದರೆ, ಮೂರನೇ ಅಂಶದ ಸಂಕೇತವನ್ನು ಎರಡನೇ ಅಂಶದ ಸಂಕೇತವನ್ನಾಗಿ ಮಾಡಬೇಕು.
(iii) ನಾಲ್ಕನೇ ಅಂಶವು ಸಮ ಸಂಖ್ಯೆಯಾಗಿದ್ದರೆ, ನಾಲ್ಕನೇ ಮತ್ತು ಐದನೇ ಅಂಶಗಳನ್ನು © ಎಂದು ಸಂಕೇತಿಸಬೇಕು.

ಹಾಗಾದರೆ ಈ ಕೆಳಗಿನ ಸಂಖ್ಯಾ-ಚಿಹ್ನೆಗಳ ಗುಂಪಿನ ಸಂಕೇತ ಯಾವುದು?
745#@

Ans
- ✗ 1. JPTCM
- ✓ 2. MPLCJ
- ✗ 3. JPLCM
- ✗ 4. ZPLCM

Q.44 ದೋಣಿಯು ನದಿಯಲ್ಲಿ ಪ್ರವಾಹದ ವಿರುದ್ಧ ದಿಕ್ಕಿನಲ್ಲಿ 100 km ಪ್ರಯಾಣಿಸಲು 8 ಗಂಟೆಗಳನ್ನು ತೆಗೆದುಕೊಳ್ಳುತ್ತದೆ ಮತ್ತು ಪ್ರವಾಹದ ದಿಕ್ಕಿನಲ್ಲಿ 80 km ಪ್ರಯಾಣಿಸಲು 5 ಗಂಟೆಗಳನ್ನು ತೆಗೆದುಕೊಳ್ಳುತ್ತದೆ. ಹಾಗಾದರೆ ಆ ದೋಣಿಯು ಪ್ರವಾಹದ ವಿರುದ್ಧ ದಿಕ್ಕಿನಲ್ಲಿ 60 km ಮತ್ತು ನಂತರ ಪ್ರವಾಹದ ದಿಕ್ಕಿನಲ್ಲಿ 60 km ಪ್ರಯಾಣಿಸಲು ಎಷ್ಟು ಸಮಯವನ್ನು (ಗಂಟೆಗಳಲ್ಲಿ) ತೆಗೆದುಕೊಳ್ಳುತ್ತದೆ? ಜತೆಗೆ ಪ್ರವಾಹದ ವೇಗವನ್ನು (km/h ಗಳಲ್ಲಿ) ಕಂಡುಹಿಡಿಯಿರಿ. (ಆಯ್ಕೆಗಳನ್ನು ಅನುಕ್ರಮವಾಗಿ ನೀಡಲಾಗಿದೆ)

Ans
- ✗ 1. 8.45, 1.75
- ✗ 2. 8, 1.5
- ✓ 3. 8.55, 1.75
- ✗ 4. 8.45, 1.5

Q.45 PQ ಮತ್ತು RS ಗಳು, 17 cm ತ್ರಿಜ್ಯ ಮತ್ತು O ಮಧ್ಯಬಿಂದುವನ್ನು ಹೊಂದಿರುವ ವೃತ್ತದ ಮಧ್ಯಬಿಂದುವಿನ ಒಂದೇ ಬದಿಯಲ್ಲಿರುವ ಎರಡು ಸಮಾಂತರ ಜ್ಯಾಗಳಾಗಿವೆ. PQ ಎಂಬುದು 16 cm ಮತ್ತು RS ಎಂಬುದು 30 cm ಆಗಿದ್ದರೆ, PQ ಮತ್ತು RS ನಡುವಿನ ಅಂತರ (cm ಗಳಲ್ಲಿ) ಎಷ್ಟು?

Ans
- ✗ 1. 5
- ✗ 2. 6
- ✓ 3. 7
- ✗ 4. 8

blackbook

Q.46 M, N, O, X, Y ಮತ್ತು Z ಎಂಬವರು ಒಂದೇ ಕಟ್ಟಡದ ಆರು ಬೇರೆ ಬೇರೆ ಮಹಡಿಗಳಲ್ಲಿ ವಾಸಿಸುತ್ತಿದ್ದಾರೆ. ಅತ್ಯಂತ ಕೆಳಗಿನ ಮಹಡಿಯನ್ನು ಸಂಖ್ಯೆ 1ರಿಂದ ಗುರುತಿಸಿದರೆ, ಅದರ ಮೇಲಿನ ಮಹಡಿಯನ್ನು ಸಂಖ್ಯೆ 2ರಿಂದ ಗುರುತಿಸಲಾಗಿದೆ. ಹೀಗೆಯೇ ಮುಂದುವರಿದು ಅತ್ಯಂತ ಮೇಲಿನ ಮಹಡಿಯನ್ನು ಸಂಖ್ಯೆ 6ರಿಂದ ಗುರುತಿಸಲಾಗಿದೆ. M ಮತ್ತು Z ನಡುವೆ ಕೇವಲ ಇಬ್ಬರು ವಾಸಿಸುತ್ತಿದ್ದಾರೆ. O ಮತ್ತು Y ನಡುವೆ ಕೇವಲ ಇಬ್ಬರು ವಾಸಿಸುತ್ತಿದ್ದಾರೆ. N ಮತ್ತು Y ನಡುವೆ ಕೇವಲ ಒಬ್ಬ ವ್ಯಕ್ತಿ ವಾಸಿಸುತ್ತಿದ್ದಾರೆ. N ಅವರು 1 ಸಂಖ್ಯೆಯ ಮಹಡಿಯಲ್ಲಿ ವಾಸಿಸುತ್ತಿದ್ದಾರೆ. M ಅವರು Y ಅವರ ಮೇಲೆ ವಾಸಿಸುತ್ತಿದ್ದಾರೆ.
ಹಾಗಾದರೆ X ಅವರ ಮೇಲೆ ಎಷ್ಟು ಜನರು ವಾಸಿಸುತ್ತಿದ್ದಾರೆ?

Ans
- ✔ 1. ಎರಡು
- ✘ 2. ಮೂರು
- ✘ 3. ಒಂದು
- ✘ 4. ನಾಲ್ಕು

Q.47 ಈ ಕೆಳಗಿನವುಗಳಲ್ಲಿ ಯಾವುದು ಪಂಚಾಯತ್ ಸಮಿತಿಯ ವಿಪತ್ತು ಸಂಬಂಧಿತ ಕಾರ್ಯವಾಗಿದೆ?

Ans
- ✘ 1. ಕೇಂದ್ರೀಯ ಯೋಜನೆಗಳಿಂದ ಪುನರ್ವಸತಿ ನಿಧಿಗಳನ್ನು ಜಾರಿಗೊಳಿಸುವುದು
- ✘ 2. ವಿಪತ್ತು ನಿರ್ವಹಣೆಯಲ್ಲಿನ ತಪ್ಪುಗಳ ಕುರಿತು ನ್ಯಾಯಾಂಗ ತನಿಖೆಯನ್ನು ಸಂಯೋಜಿಸುವುದು
- ✔ 3. ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಪರಿಹಾರವನ್ನು ಒದಗಿಸುವುದು
- ✘ 4. ಹಾನಿಗೊಳಗಾದ ಕುಟುಂಬಗಳಿಗೆ ವಿಮಾ ಕ್ಲೇಮುಗಳನ್ನು ನೀಡುವುದು

Q.48 ಆಹಾರ ಸರಪಣಿಗಳಲ್ಲಿ ಜೈವಿಕವಾಗಿ ವಿಘಟನೀಯವಲ್ಲದ ಕೀಟನಾಶಕಗಳು ಏಕೆ ಜೈವಿಕ ವರ್ಧನೆಗೆ ಒಳಗಾಗುತ್ತವೆ?

Ans
- ✔ 1. ಅವು ಜೀವಿಗಳಲ್ಲಿ ಸಂಗ್ರಹವಾಗುತ್ತವೆ ಮತ್ತು ಸುಲಭವಾಗಿ ಒಡೆಯುವುದಿಲ್ಲ.
- ✘ 2. ಅವು ವಾತಾವರಣಕ್ಕೆ ತ್ವರಿತವಾಗಿ ಆವಿಯಾಗುತ್ತವೆ.
- ✘ 3. ಅವು ಜೀರ್ಣಕ್ರಿಯೆಯ ಸಮಯದಲ್ಲಿ ನಾಶವಾಗುತ್ತವೆ.
- ✘ 4. ಅವು ನೀರಿನಲ್ಲಿ ಸಂಪೂರ್ಣವಾಗಿ ಕರಗುತ್ತವೆ.

Q.49 ಒಂದು ಭಾಗಾಕಾರದ ಲೆಕ್ಕದಲ್ಲಿ, ಭಾಜಕವು ಭಾಗಲಬ್ಧದ 18 ಪಟ್ಟು ಮತ್ತು ಶೇಷದ 9 ಪಟ್ಟು ಆಗಿರುತ್ತದೆ. ಒಂದು ವೇಳೆ ಶೇಷವು 40 ಆಗಿದ್ದರೆ, ಭಾಜ್ಯ (dividend) ಎಷ್ಟು?

Ans
- ✘ 1. 7244
- ✘ 2. 7237
- ✘ 3. 7238
- ✔ 4. 7240

Q.50 ಕಾಳಿದಾಸ, ಭಾಸ ಮತ್ತು ಭವಭೂತಿಯ ಕೃತಿಗಳೊಂದಿಗೆ ಈ ಕೆಳಗಿನ ಯಾವ ಶಾಸ್ತ್ರೀಯ ಭಾಷೆ ಸಂಬಂಧಿಸಿದೆ?

Ans
- ✘ 1. ತಮಿಳು
- ✘ 2. ಪ್ರಾಕೃತ
- ✔ 3. ಸಂಸ್ಕೃತ
- ✘ 4. ಹಿಂದಿ

Q.51 ₹15116.544 ಮೊತ್ತವನ್ನು 3 ವರ್ಷಗಳ ಕೊನೆಯಲ್ಲಿ ಪಾವತಿಸಬೇಕಾಗಿದೆ. ಒಂದು ವೇಳೆ ವಾರ್ಷಿಕ ಚಕ್ರಬಡ್ಡಿ ದರವು (ವರ್ಷಕ್ಕೊಮ್ಮೆ ಬಡ್ಡಿಯನ್ನು ಲೆಕ್ಕ ಹಾಕುವಂತೆ) 8% ಆಗಿದ್ದರೆ, ಅದರ ಪ್ರಸ್ತುತ ಮೌಲ್ಯ ಎಷ್ಟು?

Ans
- ✘ 1. ₹11,000
- ✔ 2. ₹12,000
- ✘ 3. ₹12,500
- ✘ 4. ₹13,000

Q.52 ಈ ಕೆಳಗೆ ಎರಡು ಸಂಖ್ಯಾ ಗಣಗಳನ್ನು ನೀಡಲಾಗಿದೆ. ಪ್ರತಿಯೊಂದು ಸಂಖ್ಯಾ ಗಣದಲ್ಲಿ, ಮೊದಲ ಸಂಖ್ಯೆಯ ಮೇಲೆ ಒಂದು ವಿಶಿಷ್ಟ ಗಣಿತದ ಕ್ರಿಯೆಯನ್ನು ನಡೆಸಿ ಎರಡನೇ ಸಂಖ್ಯೆಯನ್ನು ಪಡೆಯಲಾಗಿದೆ. ಅದೇ ರೀತಿ, ಎರಡನೇ ಸಂಖ್ಯೆಯ ಮೇಲೆ ಒಂದು ವಿಶಿಷ್ಟ ಗಣಿತದ ಕ್ರಿಯೆಯನ್ನು ನಡೆಸಿ ಮೂರನೇ ಸಂಖ್ಯೆಯನ್ನು ಪಡೆಯಲಾಗಿದೆ ಮತ್ತು ಈ ಪ್ರಕ್ರಿಯೆಯು ಹೀಗೆ ಮುಂದುವರಿಯುತ್ತದೆ. ಈ ಕೆಳಗಿನ ಯಾವ ಆಯ್ಕೆಯು ಪ್ರಶ್ನೆಯಲ್ಲಿರುವಂತಹ ಗಣಿತದ ಕ್ರಿಯೆಯನ್ನು ಅನುಸರಿಸುತ್ತದೆ?
(ಸೂಚನೆ: ಎರಡು/ ಮೂರು ಅಂಕಿಗಳುಳ್ಳ ಸಂಖ್ಯೆಯ ಮೇಲೆ ಗಣಿತದ ಕ್ರಿಯೆಗಳನ್ನು ನಡೆಸುವಾಗ ಅವುಗಳನ್ನು ಬಿಡಿ ಅಂಕಿಗಳಾಗಿ ವಿಭಜಿಸುವಂತಿಲ್ಲ. ಉದಾಹರಣೆಗೆ, 37 ರ ನಂತರ 10 ಬಂದರೆ, ಗಣಿತದ ಕ್ರಿಯೆಯು 3 +7 ಆಗಿರಲು ಸಾಧ್ಯವಿಲ್ಲ. ಏಕೆಂದರೆ ಎರಡು -ಅಂಕಿಯ ಸಂಖ್ಯೆಯನ್ನು ಬಿಡಿ ಬಿಡಿಯ ಅಂಕಿಗಳಾಗಿ ವಿಭಜಿಸುವಂತಿಲ್ಲ.)
9 – 36 – 72 – 90;
11 – 44 – 88 – 106

Ans
✗ 1. 7 – 28 – 56 – 72
✗ 2. 6 – 24 – 48 – 64
✗ 3. 4 – 64 – 128 – 146
✓ 4. 8 – 32 – 64 – 82

Q.53 ಥಾರ್ ಮರುಭೂಮಿಯ ದೊಡ್ಡ ಪ್ರದೇಶಗಳನ್ನು ಆವರಿಸಿರುವ ಅರ್ಧಚಂದ್ರಾಕಾರದ ಮರಳು ದಿಬ್ಬಗಳನ್ನು _____ ಎಂದು ಕರೆಯಲಾಗುತ್ತದೆ.

Ans
✗ 1. ಸೀಫ್ ದಿಬ್ಬಗಳು
✓ 2. ಬಾರಕಾನ್‌ಗಳು
✗ 3. ನಕ್ಷತ್ರ ದಿಬ್ಬಗಳು
✗ 4. ಪರವಲೀಯ ದಿಬ್ಬಗಳು

Q.54 2026 ರ ಏಷ್ಯನ್ ರಿಲೇ ಚಾಂಪಿಯನ್‌ಷಿಪ್ಸ್ ನಲ್ಲಿ, ಭಾರತದ ಮಹಿಳಾ ತಂಡವು ಋತುವಿನ ಅತ್ಯುತ್ತಮ ಸಮಯವಾದ 43.85 ಸೆಕೆಂಡುಗಳೊಂದಿಗೆ ಚಿನ್ನದ ಪದಕವನ್ನು ಗೆದ್ದುಕೊಂಡಿತು. ಈ ಪ್ರದರ್ಶನವನ್ನು ಯಾವ ರಿಲೇ ಸ್ಪರ್ಧೆಯಲ್ಲಿ ಸಾಧಿಸಲಾಯಿತು?

Ans
✗ 1. ಮಹಿಳೆಯರ 4 × 400 m ರಿಲೇ
✗ 2. ಮಿಶ್ರ 4 × 400 m ರಿಲೇ
✗ 3. ಮಹಿಳೆಯರ 4 × 200 m ರಿಲೇ
✓ 4. ಮಹಿಳೆಯರ 4 × 100 m ರಿಲೇ

Q.55 ಭಾರತದ ಉತ್ತರದ ಮೈದಾನಗಳ ಭೂಸ್ವರೂಪ ರಚನಾಶಾಸ್ತ್ರದಲ್ಲಿ, ಭಾಂಗರ್‌ಗೆ ಸಂಬಂಧಿಸಿದಂತೆ ಒಣ ಭಾಗಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಲವಣಯುಕ್ತ ಮತ್ತು ಕ್ಷಾರೀಯ ಸ್ಫುಟನ ತೇಪೆಗಳನ್ನು ಸ್ಥಳೀಯವಾಗಿ ಯಾವ ಪದದಿಂದ ಕರೆಯಲಾಗುತ್ತದೆ?

Ans
✓ 1. ರೆಹ್ ಅಥವಾ ಕಲ್ಲರ್
✗ 2. ತೆರಾಯಿ ಜೌಗು ಪ್ರದೇಶಗಳು
✗ 3. ಖಾದರ್ ನಿಕ್ಷೇಪಗಳು
✗ 4. ಬಾಬರ್ ವಲಯ

Q.56 ಕೊಟ್ಟಿರುವ ಸರಣಿಯಲ್ಲಿ ಸರಣಿಯನ್ನು ತಾರ್ಕಿಕವಾಗಿ ಪೂರ್ಣಗೊಳಿಸಲು ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಯಾವ ಆಯ್ಕೆ ಬರಬೇಕು?

15 22 40 79 129 200 282 ?

Ans
✗ 1. 387
✓ 2. 385
✗ 3. 389
✗ 4. 380

Q.57 ನೈಜ ದ್ರಾವಣದಲ್ಲಿ ಟಿಂಡಾಲ್ ಪರಿಣಾಮವು ಏಕೆ ಕಂಡುಬರುವುದಿಲ್ಲ ಎಂಬುದನ್ನು ಈ ಕೆಳಗಿನ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

Ans
✗ 1. ಕಣಗಳು ವಿಭಿನ್ನ ವಕ್ರೀಭವನ ಸೂಚ್ಯಂಕವನ್ನು ಹೊಂದಿರುತ್ತವೆ
✓ 2. ನೈಜ ದ್ರಾವಣದಲ್ಲಿರುವ ಕಣಗಳು ಬೆಳಕನ್ನು ಚದುರಿಸಲು ತುಂಬಾ ಚಿಕ್ಕದಾಗಿರುತ್ತವೆ
✗ 3. ನೈಜ ದ್ರಾವಣದಲ್ಲಿ ಗಾಳಿ ಗುಳ್ಳೆಗಳು ಇರುವುದಿಲ್ಲ
✗ 4. ನೈಜ ದ್ರಾವಣದಲ್ಲಿರುವ ಕಣಗಳು ಬಣ್ಣವನ್ನು ಹೊಂದಿರುತ್ತವೆ

blackbook

Q.58 ಕ್ಲೋರಿನ್ (Z = 17) ಮತ್ತು ನಿಯಾನ್ (Z = 10) ಗಳ ಅತ್ಯಂತ ಹೊರಗಿನ ಕವಚದಲ್ಲಿ ಕ್ರಮವಾಗಿ ಎಷ್ಟು ಎಲೆಕ್ಟ್ರಾನ್‌ಗಳು ಇವೆ?

Ans

✔ 1. 7, 8

✘ 2. 7, 7

✘ 3. 7, 2

✘ 4. 8, 7

Q.59 ಒಂದು ಚೌಕಾಕಾರದ ನಿವೇಶನದ ವಿಸ್ತೀರ್ಣವು 5041 m^2 ಆಗಿದೆ. ಹಾಗಾದರೆ ಆ ನಿವೇಶನದ ಪ್ರತಿ ಬಾಹುವಿನ ಉದ್ದ (m ಗಳಲ್ಲಿ) ಇಷ್ಟಿರುತ್ತದೆ:

Ans

✔ 1. 71

✘ 2. 61

✘ 3. 89

✘ 4. 79

Q.60 BEFRIENDS ಎಂಬ ಪದದಲ್ಲಿನ ಪ್ರತಿಯೊಂದು ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಬರುವ ಅದರ ಮುಂದಿನ ಎರಡನೇ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿಯೊಂದು ವ್ಯಂಜನಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಬರುವ ಅದರ ತಕ್ಷಣದ ಹಿಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಅಕ್ಷರಗಳ ಗುಂಪಿನಲ್ಲಿ ಈ ಕೆಳಗಿನ ಯಾವ ಅಕ್ಷರವು ನಿಖರವಾಗಿ ಎರಡು ಬಾರಿ ಕಾಣಿಸಿಕೊಳ್ಳುತ್ತದೆ?

Ans

✘ 1. C

✘ 2. R

✘ 3. M

✔ 4. G

Q.61 ಅಕ್ಷತ್ ಅವರು, ಅರ್ಧ-ವರ್ಷಕ್ಕೊಮ್ಮೆ ಚಕ್ರಬಡ್ಡಿ ಲೆಕ್ಕ ಹಾಕುವ ವಿಧಾನದಲ್ಲಿ, ₹85,100 ಮೊತ್ತವನ್ನು ವಾರ್ಷಿಕ 20% ಚಕ್ರ ಬಡ್ಡಿಯ ದರದಲ್ಲಿ 1 ವರ್ಷದ ಅವಧಿಗೆ ಹೂಡಿಕೆ ಮಾಡಿದರು. ಹಾಗಾದರೆ ಅವರು ಪಡೆಯುವ ಮೊತ್ತವು:

Ans

✘ 1. ₹103140

✘ 2. ₹102649

✘ 3. ₹102904

✔ 4. ₹102971

Q.62 In the Tamil Nadu Assembly election results of 2026, which party emerged as the single largest party?

Ans

✘ 1. Dravida Munnetra Kazhagam

✘ 2. All India Anna Dravida Munnetra Kazhagam

✔ 3. Tamilaga Vettri Kazhagam

✘ 4. Indian National Congress

Q.63 ಅಮನ್ ಅವರು ಪೂಜಾ ಅವರ ಮಗ. ಪೂಜಾ ಅವರು ರಾಜೇಶ್ ಅವರ ಹೆಂಡತಿ. ರಾಜೇಶ್ ಅವರು ದೀಪಕ್ ಅವರ ಸಹೋದರ. ದೀಪಕ್ ಅವರು ಕಾವ್ಯ ಅವರ ತಂದೆ. ಅಮನ್ ಅವರು ಕಾವ್ಯ ಅವರಿಗೆ ಹೇಗೆ ಸಂಬಂಧಿ?

Ans

✘ 1. ತಾಯಿಯ ಸಹೋದರಿಯ ಮಗ

✘ 2. ತಾಯಿಯ ಸಹೋದರನ ಮಗ

✔ 3. ತಂದೆಯ ಸಹೋದರನ ಮಗ

✘ 4. ತಂದೆಯ ಸಹೋದರಿಯ ಮಗ

Q.64 D, E, F, G, U, V ಮತ್ತು W ಎಂಬ ಏಳು ಜನರು ಉತ್ತರ ದಿಕ್ಕಿಗೆ ಮುಖ ಮಾಡಿ ಒಂದು ನೇರ ಸಾಲಿನಲ್ಲಿ ಕುಳಿತಿದ್ದಾರೆ. D ಅವರು ಸಾಲಿನ ಬಲ ತುದಿಯಿಂದ ಎರಡನೇ ಸ್ಥಾನದಲ್ಲಿ ಕುಳಿತಿದ್ದಾರೆ. G ಅವರು U ಅವರ ತಕ್ಷಣದ ಎಡಕ್ಕೆ ಕುಳಿತಿದ್ದಾರೆ. E ಮತ್ತು D ನಡುವೆ ಕೇವಲ ನಾಲ್ಕು ಜನರು ಕುಳಿತಿದ್ದಾರೆ. W ಅವರ ಬಲಕ್ಕೆ ಕೇವಲ ಮೂರು ಜನರು ಕುಳಿತಿದ್ದಾರೆ. V ಅವರು W ಅವರ ತಕ್ಷಣದ ನೆರೆಹೊರೆಯವರಲ್ಲ.
ಹಾಗಾದರೆ, E ಮತ್ತು W ನಡುವೆ ಎಷ್ಟು ಜನರು ಕುಳಿತಿದ್ದಾರೆ?

Ans
✗ 1. ನಾಲ್ವರು
✗ 2. ಮೂವರು
✗ 3. ಒಬ್ಬರು
✓ 4. ಇಬ್ಬರು

Q.65 ಭಾರತೀಯ ರಿಸರ್ವ್ ಬ್ಯಾಂಕಿನ (RBI) ವಿತ್ತ ನೀತಿ ಸಾಧನವಾದ 'ರೆಪೊ ದರ'ವನ್ನು ಈ ಕೆಳಗಿನ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

Ans
✗ 1. ಬ್ಯಾಂಕುಗಳು ಆರ್.ಬಿ.ಐ ಗೆ ಯಾವ ದರದಲ್ಲಿ ಸಾಲ ನೀಡುತ್ತವೆಯೋ ಆ ದರ
✗ 2. ಮೀಸಲು ಆಗಿ ಇಡಬೇಕಾದ ಠೇವಣಿಗಳ ಶೇಕಡಾವಾರು
✗ 3. ದೀರ್ಘಾವಧಿಯ ಸರ್ಕಾರಿ ಸಾಲಗಳ ದರ
✓ 4. ವಾಣಿಜ್ಯ ಬ್ಯಾಂಕುಗಳಿಗೆ ಆರ್.ಬಿ.ಐ ಯಾವ ದರದಲ್ಲಿ ಸಾಲ ನೀಡುತ್ತದೆಯೋ ಆ ದರ

Q.66 $\frac{\sqrt{\tan^2A+(\operatorname{cosec}^2A-1)+2}}{(\tanA+\cotA)}$ ನ ಮೌಲ್ಯವನ್ನು ಕಂಡುಹಿಡಿಯಿರಿ.

Ans
✓ 1. 1
✗ 2. 2
✗ 3. cotA
✗ 4. tanA

Q.67 ಒಂದು ಚೌಕದ ಕರ್ಣದ ಉದ್ದ 6√2 cm ಇದೆ. ಆ ಚೌಕದ ಸುತ್ತಳತೆಯನ್ನು (cm ಗಳಲ್ಲಿ) ಕಂಡುಹಿಡಿಯಿರಿ.

Ans
✗ 1. 32
✓ 2. 24
✗ 3. 48
✗ 4. 20

Q.68 ಒಂದು ತರಗತಿಯಲ್ಲಿನ ವಿದ್ಯಾರ್ಥಿಗಳು ಗಣಿತದಲ್ಲಿ ಪಡೆದ ಸರಾಸರಿ ಅಂಕಗಳು 77 ಆಗಿವೆ. ಹುಡುಗರು ಪಡೆದ ಸರಾಸರಿ ಅಂಕಗಳು ಹುಡುಗಿಯರು ಪಡೆದ ಸರಾಸರಿ ಅಂಕಗಳಿಗಿಂತ 60% ಹೆಚ್ಚು ಇವೆ. ಹುಡುಗರ ಸಂಖ್ಯೆ ಮತ್ತು ಹುಡುಗಿಯರ ಸಂಖ್ಯೆಯ ನಡುವಿನ ಅನುಪಾತವು 7: 2 ಆಗಿದ್ದರೆ, ಹುಡುಗಿಯರು ಪಡೆದ ಸರಾಸರಿ ಅಂಕಗಳು ಎಷ್ಟು?

Ans
✗ 1. 54
✗ 2. 47.6
✗ 3. 52
✓ 4. 52.5

Q.69 1980 ರ ಅಕ್ಟೋಬರ್ ನಲ್ಲಿ, ಕೆಲಸಕ್ಕಾಗಿ ಆಹಾರ ಯೋಜನೆಯ ಸ್ಥಾನದಲ್ಲಿ ಈ ಕೆಳಗಿನ ಯಾವ ಯೋಜನೆಯನ್ನು ಪ್ರಾರಂಭಿಸಲಾಯಿತು?

Ans
✓ 1. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ
✗ 2. ಗ್ರಾಮೀಣ ಯುವಕರಿಗೆ ಸ್ವ-ಉದ್ಯೋಗಕ್ಕಾಗಿ ತರಬೇತಿ
✗ 3. ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ
✗ 4. ಗ್ರಾಮೀಣ ಪ್ರದೇಶಗಳಲ್ಲಿನ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ

Q.70 ಕ್ಸೈಲಂ ಅಂಗಾಂಶದಲ್ಲಿ ಟ್ರಾಕಿಡ್‌ಗಳು ಮತ್ತು ನಾಳಗಳ ಪ್ರಮುಖ ಕಾರ್ಯವೇನು?

Ans
✗ 1. ಅವು ಕೇವಲ ಕಾಂಡಗಳಿಗೆ ಯಾಂತ್ರಿಕ ಆಧಾರವನ್ನು ಒದಗಿಸುತ್ತವೆ
✗ 2. ಅವು ಭವಿಷ್ಯದ ಬಳಕೆಗಾಗಿ ಕಾರ್ಬೋಹೈಡ್ರೇಟ್‌ಗಳನ್ನು ಸಂಗ್ರಹಿಸುತ್ತವೆ
✓ 3. ಅವು ನೀರು ಮತ್ತು ಖನಿಜಾಂಶಗಳನ್ನು ಮೇಲಕ್ಕೆ ಸಾಗಿಸುತ್ತವೆ
✗ 4. ಅವು ಆಹಾರದ ಸಮತಲ ಚಲನೆಗೆ ಸಹಾಯ ಮಾಡುತ್ತವೆ

blackbook

Q.71 ಆಂಗ್ಲ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಕೊಟ್ಟಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಅಕ್ಷರ ಸರಿಹೊಂದುತ್ತದೆ?

IKN HJM GIL FHK ?

Ans

✗ 1. EHJ

✗ 2. EHI

✗ 3. EGI

✓ 4. EGJ

Q.72 ಹೆರಿಗೆಯ ಸಮಯದಲ್ಲಿ ತಾಯಿ ಅಥವಾ ಭ್ರೂಣವು ಅಪಾಯವನ್ನು ಎದುರಿಸಿದರೆ, ವೈದ್ಯರು ಯಾವ ಕ್ರಮ ತೆಗೆದುಕೊಳ್ಳಬಹುದು?

Ans

✓ 1. ಸುರಕ್ಷಿತ ಹೆರಿಗೆಯನ್ನು ಖಚಿತಪಡಿಸಿಕೊಳ್ಳಲು ಶಸ್ತ್ರಚಿಕಿತ್ಸಾ ವಿಧಾನಗಳನ್ನು ನಿರ್ವಹಿಸಬಹುದು

✗ 2. ಯಾವುದೇ ಕ್ರಮವನ್ನು ತೆಗೆದುಕೊಳ್ಳದೆ ನಿಷ್ಕ್ರಿಯವಾಗಿ ಕಾಯಬಹುದು

✗ 3. ಅಪಾಯವನ್ನು ಪರಿಗಣಿಸದೆ ಎಲ್ಲಾ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸಾ ವಿಧಾನಗಳನ್ನು ತಪ್ಪಿಸಬಹುದು

✗ 4. ಎಲ್ಲಾ ಅಪಾಯಗಳು ಕಣ್ಮರೆಯಾಗುವವರೆಗೆ ಹೆರಿಗೆಯನ್ನು ವಿಳಂಬಗೊಳಿಸಬಹುದು

Q.73 2026 – 27 ರ ಕೇಂದ್ರ ಬಜೆಟ್ ನಲ್ಲಿ ಘೋಷಿಸಲಾದ ಇಂಡಿಯಾ ಸೆಮಿಕಂಡಕ್ಟರ್ ಮಿಷನ್ 2.0, ಕಂಪ್ಯೂಟರ್-ತಂತ್ರಜ್ಞಾನ ಅಭಿವೃದ್ಧಿಯ ಯಾವ ಕ್ಷೇತ್ರದ ಮೇಲೆ ಕೇಂದ್ರೀಕರಿಸಿದೆ?

Ans

✗ 1. ಗ್ರಾಮೀಣ ಬ್ರಾಡ್ ಬ್ಯಾಂಡ್ ಮ್ಯಾಪಿಂಗ್ ಮತ್ತು ಟ್ಯಾರಿಫ್ ನಿಯಂತ್ರಣ

✗ 2. ಆನ್‌ಲೈನ್ ಗೇಮಿಂಗ್ ಪ್ರಮಾಣೀಕರಣ ಮತ್ತು ಬಳಕೆದಾರರ ಸುರಕ್ಷತೆ

✗ 3. ಡಿಜಿಟಲ್ ಪಾವತಿ ದೃಢೀಕರಣ ಮತ್ತು ಇತ್ಯರ್ಥ

✓ 4. ಚಿಪ್ ಉಪಕರಣಗಳು, ಸಾಮಗ್ರಿಗಳು ಮತ್ತು ಸುಧಾರಿತ ತಯಾರಿಕೆ

Q.74 92A445B ಎಂಬ 7-ಅಂಕಿಯ ಸಂಖ್ಯೆಯನ್ನು 4 ರಿಂದ ನಿಶ್ಯೇಷವಾಗಿ ಭಾಗಿಸಬಹುದಾಗಿದೆ. ಹಾಗಾದರೆ (A+B) ಯ ಕನಿಷ್ಠ ಮೌಲ್ಯ ಎಷ್ಟು?

Ans

✗ 1. 4

✗ 2. 3

✗ 3. 6

✓ 4. 2

Q.75 ₹4984 ಅನ್ನು ಮೂರು ಭಾಗಗಳಾಗಿ ವಿಂಗಡಿಸಬೇಕಿದ್ದು, ಮೊದಲ ಭಾಗದ ಅರ್ಧದಷ್ಟು, ಎರಡನೇ ಭಾಗದ ನಾಲ್ಕನೇ ಒಂದರಷ್ಟು ಮತ್ತು ಮೂರನೇ ಭಾಗದ ಎಂಟನೇ ಒಂದರಷ್ಟು ಸಮಾನವಾಗಿರಬೇಕು. ಹಾಗಾದರೆ, ಮೊದಲ ಭಾಗವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans

✗ 1. 2748

✗ 2. 2548

✓ 3. 2848

✗ 4. 3148

Q.76 ಒಂದು ಕೆಲಸವನ್ನು A ಅವರು 4 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು, ಆದರೆ B ಅವರು ಅದೇ ಕೆಲಸವನ್ನು 52 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. B ಅವರೊಬ್ಬರೇ 13 ದಿನಗಳು ಕೆಲಸ ಮಾಡಿ ನಂತರ ಕೆಲಸ ಬಿಡುತ್ತಾರೆ. ಉಳಿದ ಕೆಲಸವನ್ನು A ಅವರೊಬ್ಬರೇ ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಬಲ್ಲರು?

Ans

✓ 1. 3

✗ 2. 5

✗ 3. 2

✗ 4. 4

Q.77 ಒಂದು ಆಯತಾಕಾರದ ಪೆಟ್ಟಿಗೆಯ (ಘನಾಭ) ಮೂರು ಪಾರ್ಶ್ವ ಮುಖಗಳ ವಿಸ್ತೀರ್ಣಗಳು 120 ಚದರ cm, 72 ಚದರ cm ಮತ್ತು 60 ಚದರ cm ಆಗಿದೆ. ಹಾಗಾದರೆ ಪೆಟ್ಟಿಗೆಯ ಘನಫಲ ಎಷ್ಟು?

Ans

✗ 1. 840 ಘನ cm

✗ 2. 680 ಘನ cm

✗ 3. 960 ಘನ cm

✓ 4. 720 ಘನ cm

blackbook

Q.78 48 ವಿದ್ಯಾರ್ಥಿಗಳು ಒಂದು ಸಾಲಿನಲ್ಲಿ ಉತ್ತರಕ್ಕೆ ಮುಖ ಮಾಡಿದ್ದು, ಅದರಲ್ಲಿ ಮಧು ಅವರು ಎಡ ತುದಿಯಿಂದ 22ನೇ ಸ್ಥಾನದಲ್ಲಿದ್ದಾರೆ. ಒಂದು ವೇಳೆ ಸುರೇಶ್ ಅವರು ಮಧು ಅವರ ಬಲಕ್ಕೆ 25ನೇ ಸ್ಥಾನದಲ್ಲಿದ್ದರೆ, ಸಾಲಿನ ಬಲ ತುದಿಯಿಂದ ಸುರೇಶ್ ಅವರ ಸ್ಥಾನವೇನು?

Ans
- ✔ 1. 2ನೇ
- ✘ 2. 3ನೇ
- ✘ 3. 4ನೇ
- ✘ 4. 1ನೇ

Q.79 ಬೋರ್ ಅವರ ಆಧಾರಸೂತ್ರಗಳು ಜಲಜನಕದ ಸ್ಥಿರತೆಯನ್ನು ವಿವರಿಸುತ್ತವೆ ಆದರೆ ಬಹು-ಎಲೆಕ್ಟ್ರಾನ್ ಪರಮಾಣುಗಳಿಗೆ ಸಂಬಂಧಿಸಿದಂತೆ ವಿಫಲಗೊಳ್ಳುತ್ತವೆ ಏಕೆಂದರೆ:

Ans
- ✔ 1. ಬೋರ್ ಅವರ ಮಾದರಿಯಲ್ಲಿ ಎಲೆಕ್ಟ್ರಾನ್-ಎಲೆಕ್ಟ್ರಾನ್ ಪಾರಸ್ಪರಿಕ ಕ್ರಿಯೆಗಳನ್ನು ಪರಿಗಣಿಸಲಾಗುವುದಿಲ್ಲ
- ✘ 2. ಬೋರ್ ಅವರ ಮಾದರಿಯಲ್ಲಿ ನ್ಯೂಕ್ಲಿಯಸ್‌ನಲ್ಲಿರುವ ನ್ಯೂಟ್ರಾನ್‌ಗಳು ಎಲೆಕ್ಟ್ರಾನ್ ಪಥಗಳ ಮೇಲೆ ಪರಿಣಾಮ ಬೀರುತ್ತವೆ
- ✘ 3. ದೊಡ್ಡ ಪರಮಾಣುಗಳಲ್ಲಿ ಪ್ರೋಟಾನ್‌ಗಳು ವೇಗವಾಗಿ ಚಲಿಸಿ, ಕಕ್ಷೆಗಳನ್ನು ಪ್ರಕ್ಷುಬ್ಧಗೊಳಿಸುತ್ತವೆ
- ✘ 4. ಬಹು-ಎಲೆಕ್ಟ್ರಾನ್ ಪರಮಾಣುಗಳಲ್ಲಿ ಎಲೆಕ್ಟ್ರಾನ್‌ಗಳಿಗೆ ದ್ರವ್ಯರಾಶಿ ಇರುವುದಿಲ್ಲ ಎಂದು ಅಂದಾಜಿಸಲಾಗಿದೆ

Q.80 ಈ ಕೆಳಗಿನ ರೇಖೀಯ ಸಮೀಕರಣಗಳನ್ನು ಬಿಡಿಸಿ.
$2x-y+3z=8,\ x-y-z=7,\ x+y+z=10$

Ans
- ✘ 1. $x=\frac{-17}{2}, y=\frac{-27}{8}, z=\frac{15}{8}$
- ✘ 2. $x=\frac{17}{2}, y=\frac{-27}{8}, z=\frac{-15}{8}$
- ✔ 3. $x=\frac{17}{2}, y=\frac{27}{8}, z=\frac{-15}{8}$
- ✘ 4. $x=\frac{17}{2}, y=\frac{27}{8}, z=\frac{15}{8}$

Q.81 ನೀರಿನ ಅಡಿಯಲ್ಲಿರುವ ಒಂದು ವಸ್ತುವನ್ನು ರಕ್ಷಿಸುವ ಉದ್ದೇಶದಿಂದ ಒಬ್ಬ ಜೀವರಕ್ಷಕನು ನಿಖರವಾಗಿ ಅದರ ತೋರಿಕೆಯ ಸ್ಥಾನಕ್ಕೆ ಧುಮುಕಬಾರದು ಏಕೆ?

Ans
- ✘ 1. ವಸ್ತುವು ಇನ್ನೂ ಹೆಚ್ಚು ದೂರದಲ್ಲಿ ಕಾಣಿಸುತ್ತದೆ
- ✘ 2. ವಕ್ರೀಭವನದಿಂದಾಗಿ ವಸ್ತುವು ನಿರಂತರವಾಗಿ ಚಲಿಸುತ್ತಿರುತ್ತದೆ
- ✔ 3. ವಕ್ರೀಭವನದಿಂದಾಗಿ ವಸ್ತುವು ಕಡಿಮೆ ಆಳದಲ್ಲಿರುವಂತೆ ಕಾಣುತ್ತದೆ
- ✘ 4. ನೀರು ವಸ್ತುವನ್ನು ಪ್ರತಿಫಲಿಸುತ್ತದೆ

Q.82 C ಎಂಬ ವೃತ್ತದ ತ್ರಿಜ್ಯ 8 cm ಆಗಿದೆ ಮತ್ತು ಅದರ ಮಧ್ಯಬಿಂದು O ಆಗಿದೆ. C ವೃತ್ತದ ವಿಸ್ತೀರ್ಣ ಮತ್ತು O ಮಧ್ಯಬಿಂದುವಿನಲ್ಲಿ 120° ಕೋನವನ್ನು ಉಂಟು ಮಾಡುವ C ವೃತ್ತದ ತ್ರಿಜ್ಯಾಂತರ ಖಂಡದ ವಿಸ್ತೀರ್ಣಗಳ ನಡುವಿನ ವ್ಯತ್ಯಾಸ ಎಷ್ಟು?

Ans
- ✘ 1. $\frac{124\pi}{3}\ cm^2$
- ✘ 2. $\frac{125\pi}{3}\ cm^2$
- ✔ 3. $\frac{128\pi}{3}\ cm^2$
- ✘ 4. $\frac{120\pi}{3}\ cm^2$

Q.83 ಒಂದುವೇಳೆ ಕೆಳಗಿನ ಸಮೀಕರಣದಲ್ಲಿನ '+' ಮತ್ತು '-' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ ಮತ್ತು 'x' ಮತ್ತು '÷' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ, ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಆಯ್ಕೆಯು ಸರಿಹೊಂದುತ್ತದೆ?

315 - 280 x 5 ÷ 3 +19 =?

Ans
- ✘ 1. 475
- ✘ 2. 482
- ✘ 3. 460
- ✔ 4. 464

Black

Q.84 ಒಂದು ವೇಳೆ 6a − b + 3c = −9, a + b − c = 4 ಮತ್ತು 3a − b + 4c = −5 ಆಗಿದ್ದರೆ, a + b + c ಯ ಮೌಲ್ಯ ಎಷ್ಟು?

Ans
✗ 1. 0
✗ 2. 1
✓ 3. 6
✗ 4. −1

Q.85 ಸಸ್ಯ ಕಾಂಡಗಳಲ್ಲಿ ಪಾರ್ಶ್ವ ವರ್ಧನ ಅಂಗಾಂಶದ ಜೋಡಣೆ ಮತ್ತು ಕಾರ್ಯವನ್ನು ಈ ಕೆಳಗಿನವುಗಳಲ್ಲಿ ಯಾವುದು ವಿವರಿಸುತ್ತದೆ?

Ans
✗ 1. ಕಾಂಡದಲ್ಲಿ ಹರಡಿಕೊಂಡಿರುತ್ತದೆ, ಪೋಷಕಾಂಶಗಳನ್ನು ಸಂಗ್ರಹಿಸುತ್ತದೆ
✗ 2. ತುದಿಯಲ್ಲಿರುತ್ತದೆ, ಉದ್ದವನ್ನು ಹೆಚ್ಚಿಸುತ್ತದೆ
✓ 3. ಉಂಗುರಾಕೃತಿಗಳಲ್ಲಿ ಜೋಡಿಸಲಾಗಿದೆ, ವ್ಯಾಸವನ್ನು ಹೆಚ್ಚಿಸುತ್ತದೆ
✗ 4. ಗಿಣ್ಣುಗಳಲ್ಲಿ ಕಂಡುಬರುತ್ತದೆ, ಕೊಂಬೆಗಳನ್ನು ರೂಪಿಸುತ್ತದೆ

Q.86 ಒಂದು ನಿರ್ದಿಷ್ಟ ಮೊತ್ತವನ್ನು ಸರಳ ಬಡ್ಡಿಯಲ್ಲಿ ಹೂಡಿಕೆ ಮಾಡಿದಾಗ, ಅದು 2 ವರ್ಷಗಳಲ್ಲಿ ₹1,750 ಆಗುತ್ತದೆ ಮತ್ತು 3 ವರ್ಷಗಳಲ್ಲಿ ₹2,000 ಆಗುತ್ತದೆ. ಹಾಗಾದರೆ ಶೇಕಡಾವಾರು ರೂಪದಲ್ಲಿ (%) ವಾರ್ಷಿಕ ಬಡ್ಡಿ ದರವನ್ನು ಕಂಡುಹಿಡಿಯಿರಿ.

Ans
✓ 1. 20
✗ 2. 50
✗ 3. 25
✗ 4. 10

Q.87 ಒಂದು ನಿರ್ದಿಷ್ಟ ರೀತಿಯಲ್ಲಿ GH 9 ಎಂಬುದು JG 28 ಎಂಬುದಕ್ಕೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, HH 13 ಎಂಬುದು KG 32 ಎಂಬುದಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, OP 23 ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

Ans
✓ 1. RO 42
✗ 2. RP 42
✗ 3. SO 38
✗ 4. SP 44

Q.88 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಬೇಕು ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಬೇಕು.

ಪ್ರಶ್ನೆ: ಆಧ್ಯಾ, ಭವಿನ್, ಚರಿತ್, ದೇವಿಕಾ ಮತ್ತು ಇಶಾನ್ ಎಂಬ ಐವರು ಸ್ನೇಹಿತರು ಬೇರೆ ಬೇರೆ ವಯಸ್ಸಿನವರಾಗಿದ್ದಾರೆ. ಅವರಲ್ಲಿ ಅತ್ಯಂತ ಅತ್ಯಂತ ಕಿರಿಯ ವಯಸ್ಸಿನವರು ಯಾರು?

ಹೇಳಿಕೆಗಳು:
(I) ದೇವಿಕಾ ಅವರು ಚರಿತ್ ಗಿಂತ ಕಿರಿಯರು ,ಆದರೆ ಭವಿನ್ ಗಿಂತ ಹಿರಿಯರು.
(II) ಆಧ್ಯಾ ಅವರು ದೇವಿಕಾಗಿಂತ ಹಿರಿಯರು, ಮತ್ತು ಇಶನ್ ಅವರು ಚರಿತ್ ಗಿಂತ ಹಿರಿಯರು.

Ans
✗ 1. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಅದೇವೇಳೆ ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ
✗ 2. ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ. ಅದೇವೇಳೆ ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ
✗ 3. ಹೇಳಿಕೆ I ಮತ್ತು II ರಲ್ಲಿರುವ ಒಟ್ಟುಗೂಡಿಸಿದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುವುದಿಲ್ಲ
✓ 4. ಪ್ರಶ್ನೆಗೆ ಉತ್ತರಿಸಲು I ಮತ್ತು II ಎರಡೂ ಹೇಳಿಕೆಗಳು ಒಟ್ಟುಗೂಡಿಸಿದ ಮಾಹಿತಿಯು (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಸಾಕಾಗುತ್ತದೆ

Q.89 ಒಂದು ವೇಳೆ $15\sin A + \cos A = \sqrt{8}\sin A$ ಆಗಿದ್ದರೆ, $\tan A$ ಯ ಮೌಲ್ಯವನ್ನು ಕಂಡುಹಿಡಿಯಿರಿ.

Ans
✔ 1. $\frac{-15-\sqrt{8}}{217}$
✘ 2. $\frac{-16-\sqrt{8}}{217}$
✘ 3. $\frac{-15-\sqrt{8}}{227}$
✘ 4. $\frac{-15-\sqrt{8}}{212}$

Q.90 ಕೇಶವ ಎಂಬವರು A ಬಿಂದುವಿನಿಂದ ವಾಹನ ಚಾಲನೆ ಮಾಡುವುದನ್ನು ಪ್ರಾರಂಭಿಸಿ ಪಶ್ಚಿಮದ ಕಡೆಗೆ 7 km ನಷ್ಟು ದೂರಕ್ಕೆ ಚಾಲನೆ ಮಾಡುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 13 km ದೂರಕ್ಕೆ ಚಾಲನೆ ಮಾಡುತ್ತಾರೆ. ಅಂತಿಮವಾಗಿ ಅವರು ಎಡಕ್ಕೆ ತಿರುಗಿ 7 km ದೂರಕ್ಕೆ ಚಾಲನೆ ಮಾಡಿ B ಬಿಂದುವಿನಲ್ಲಿ ನಿಲ್ಲುತ್ತಾರೆ. ಪ್ರಣಯ್ ಅವರು A ಬಿಂದುವಿನಿಂದ 10 km ನಷ್ಟು ಪೂರ್ವಕ್ಕೆ ಇರುವ P ಬಿಂದುವಿನಿಂದ ವಾಹನ ಚಾಲನೆಯನ್ನು ಪ್ರಾರಂಭಿಸಿ ಪೂರ್ವಕ್ಕೆ 4 km ದೂರಕ್ಕೆ ಚಾಲನೆ ಮಾಡುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 13 km ದೂರಕ್ಕೆ ಚಾಲನೆ ಮಾಡುತ್ತಾರೆ. ಅಂತಿಮವಾಗಿ ಅವರು ಬಲಕ್ಕೆ ತಿರುಗಿ 2 km ದೂರಕ್ಕೆ ಚಾಲನೆ ಮಾಡಿ Q ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ Q ಬಿಂದು ಮತ್ತು B ಬಿಂದುವಿನ ನಡುವಿನ ಅತ್ಯಂತ ಕಡಿಮೆ ಅಂತರ ಎಷ್ಟು? (ಎಲ್ಲಾ ತಿರುವುಗಳು ಕೇವಲ 90 ಡಿಗ್ರಿಯ ತಿರುವುಗಳು.)

Ans
✔ 1. 12 km
✘ 2. 10 km
✘ 3. 13 km
✘ 4. 11 km

Q.91 ಜಠರದಲ್ಲಿರುವ ಯಾವ ಕಿಣ್ವವು ಪ್ರೋಟೀನ್‌ಗಳನ್ನು ಜೀರ್ಣಿಸಿಕೊಳ್ಳಲು ಸಹಾಯ ಮಾಡುತ್ತದೆ?

Ans
✘ 1. ಲಿಪೇಸ್
✘ 2. ಟ್ರಿಪ್ಸಿನ್
✔ 3. ಪೆಪ್ಸಿನ್
✘ 4. ಅಮೈಲೇಸ್

Q.92 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ,
'happy child plays' ಎಂಬುದನ್ನು 'sy wc qz' ಎಂದು ಸಂಕೇತಿಸಲಾಗಿದೆ,
'happy smiles mother' ಎಂಬುದನ್ನು 'ta gk sy' ಎಂದು ಸಂಕೇತಿಸಲಾಗಿದೆ, ಮತ್ತು
'beautifully child smiles' ಎಂಬುದನ್ನು 'wc bt gk' ಎಂದು ಸಂಕೇತಿಸಲಾಗಿದೆ,
(ಎಲ್ಲಾ ಸಂಕೇತಗಳು ಎರಡಕ್ಷರದ ಸಂಕೇತಗಳು)

ಹಾಗಾದರೆ ನೀಡಿರುವ ಸಂಕೇತ ಭಾಷೆಯಲ್ಲಿ 'bt' ಯಾವುದರ ಸಂಕೇತ ಆಗಿದೆ?

Ans
✘ 1. plays
✔ 2. beautifully
✘ 3. child
✘ 4. happy

Q.93 A, B, U, V, Y, ಮತ್ತು Z ಎಂಬವರಲ್ಲಿ ಪ್ರತಿಯೊಬ್ಬರೂ ಬೇರೆ ಬೇರೆ ಅಂಕಗಳನ್ನು ಗಳಿಸಿದ್ದಾರೆ. U ಮತ್ತು B ನಡುವೆ ಕೇವಲ ಎರಡು ಜನರು ಅಂಕಗಳನ್ನು ಗಳಿಸಿದ್ದಾರೆ. ಒಬ್ಬ ವ್ಯಕ್ತಿ ಮಾತ್ರ A ಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾನೆ. A ಮತ್ತು U ನಡುವೆ ಕೇವಲ ಮೂರು ಜನರು ಅಂಕಗಳನ್ನು ಗಳಿಸಿದ್ದಾರೆ. Z ಅವರು Y ಗಿಂತ ಹೆಚ್ಚು ಅಂಕಗಳನ್ನು, ಆದರೆ V ಗಿಂತ ಕಡಿಮೆ ಅಂಕಗಳನ್ನು ಗಳಿಸಿದ್ದಾರೆ.
ಹಾಗಾದರೆ ಎಷ್ಟು ಜನರು A ಗಿಂತ ಕಡಿಮೆ ಅಂಕಗಳನ್ನು ಗಳಿಸಿದ್ದಾರೆ?

Ans
✔ 1. ನಾಲ್ಕು
✘ 2. ಮೂರು
✘ 3. ಒಂದು
✘ 4. ಎರಡು

blackbook

Q.94 ಕೆಳಗಿನ ಸಂಖ್ಯೆ, ಚಿಹ್ನೆಗಳ ಸರಣಿಯನ್ನು ಗಮನಿಸಿ ಮತ್ತು ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು. ಎಲ್ಲಾ ಸಂಖ್ಯೆಗಳು ಒಂದಂಕಿಯ ಸಂಖ್ಯೆಗಳಾಗಿವೆ.

(ಎಡ) 5 @ 3 $ 8 & 6 Ω 2 % 9 * 4 £ 7 # 1 & 3 (ಬಲ)

ಪ್ರತಿಯೊಂದೂ ತನ್ನ ತಕ್ಷಣದ ಹಿಂದೆಯೂ ಸಂಖ್ಯೆಯನ್ನು ಮತ್ತು ತನ್ನ ತಕ್ಷಣದ ಮುಂದೆಯೂ ಸಂಖ್ಯೆಯನ್ನು ಹೊಂದಿರುವ ಎಷ್ಟು ಚಿಹ್ನೆಗಳು ಈ ಸರಣಿಯಲ್ಲಿವೆ?

Ans
✗ 1. ಒಂದು
✓ 2. ಮೂರಕ್ಕಿಂತ ಹೆಚ್ಚು
✗ 3. ಎರಡು
✗ 4. ಮೂರು

Q.95 ಎರಡು ಧಾತುಗಳಾದ ಕ್ಯಾಲ್ಸಿಯಂ (ಪರಮಾಣ್ವಿಕ ಸಂಖ್ಯೆ 20, ರಾಶಿ ಸಂಖ್ಯೆ 40) ಮತ್ತು ಆರ್ಗಾನ್ (ಪರಮಾಣ್ವಿಕ ಸಂಖ್ಯೆ 18, ರಾಶಿ ಸಂಖ್ಯೆ 40) ಗಳನ್ನು ಹೋಲಿಸಲಾಗುತ್ತದೆ. ಕೊಟ್ಟಿರುವ ಧಾತುಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ಸರಿಯಾಗಿದೆ?

Ans
✗ 1. ಎರಡೂ ಒಂದೇ ರಾಶಿ ಸಂಖ್ಯೆ ಮತ್ತು ಪರಮಾಣ್ವಿಕ ಸಂಖ್ಯೆಯನ್ನು ಹೊಂದಿರುವುದರಿಂದ ಅವು ಸಮರೂಪವುಳ್ಳವಾಗಿರುತ್ತವೆ.
✗ 2. ಅವು ಒಂದೇ ಪರಮಾಣ್ವಿಕ ಸಂಖ್ಯೆ ಆದರೆ ಬೇರೆ ಬೇರೆ ರಾಶಿ ಸಂಖ್ಯೆಗಳನ್ನು ಹೊಂದಿರುವುದರಿಂದ ಅವು ಸಮಸ್ಥಾನೀಯಗಳಾಗಿರುತ್ತವೆ.
✗ 3. ಅವು ಒಂದೇ ಪರಮಾಣ್ವಿಕ ಸಂಖ್ಯೆಯನ್ನು ಹೊಂದಿರುವುದರಿಂದ ಅವು ಸಮಭಾರವಸ್ತುಗಳಾಗಿರುತ್ತವೆ.
✓ 4. ಅವು ಒಂದೇ ರಾಶಿ ಸಂಖ್ಯೆಯನ್ನು ಹೊಂದಿದ್ದರೂ ಬೇರೆ ಬೇರೆ ಪರಮಾಣ್ವಿಕ ಸಂಖ್ಯೆಗಳನ್ನು ಹೊಂದಿರುವುದರಿಂದ ಅವು ಸಮಭಾರವಸ್ತುಗಳಾಗಿವೆ.

Q.96 ಕೆಳಗೆ ಕೊಟ್ಟಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?

243 226 210 195 181 168 ?

Ans
✓ 1. 156
✗ 2. 152
✗ 3. 161
✗ 4. 158

Q.97 ಒಬ್ಬ ಚಿಲ್ಲರೆ ವ್ಯಾಪಾರಿಯು ₹2,00,000 ನಮೂದಿತ ಬೆಲೆಯ ಸರಕುಗಳನ್ನು ಖರೀದಿಸುತ್ತಾನೆ. ಒಂದುವೇಳೆ 10 ದಿನಗಳೊಳಗೆ ಹಣ ಪಾವತಿ ಮಾಡಿದರೆ, ಮಾರಾಟಗಾರನು 20% ವ್ಯಾಪಾರ ರಿಯಾಯಿತಿ ಮತ್ತು 5% ನಗದು ರಿಯಾಯಿತಿಯನ್ನು ನೀಡುತ್ತಾನೆ. ಒಂದು ವೇಳೆ ಚಿಲ್ಲರೆ ವ್ಯಾಪಾರಿಯು ಈ ರಿಯಾಯಿತಿ ಅವಧಿಯೊಳಗೆ ಪಾವತಿಸಿದರೆ, ಅಂತಿಮವಾಗಿ ಅವನು ಪಾವತಿಸಿದ ಮೊತ್ತ ಎಷ್ಟು?

Ans
✗ 1. ₹1,51,000
✓ 2. ₹1,52,000
✗ 3. ₹1,50,000
✗ 4. ₹1,60,000

Q.98 ಕೆಳಗಿನ ಅಕ್ಷರ, ಚಿಹ್ನೆಗಳ ಸರಣಿಯನ್ನು ನೋಡಿ ಮತ್ತು ಪ್ರಶ್ನೆಗೆ ಉತ್ತರಿಸಿ.

(ಎಡ) # $ V Y W Ω F K Q λ * D A B H T σ I K % Y (ಬಲ)

ಒಂದುವೇಳೆ ಎಲ್ಲಾ ಅಕ್ಷರಗಳನ್ನು ಸರಣಿಯಿಂದ ತೆಗೆದುಹಾಕಿದರೆ, ಈ ಕೆಳಗಿನವುಗಳಲ್ಲಿ ಯಾವುದು ಎಡದಿಂದ ನಾಲ್ಕನೆಯದಾಗಿರುತ್ತದೆ?

Ans
✗ 1. $
✗ 2. #
✓ 3. λ
✗ 4. σ

Q.99 8, 12, 16, 20, 24 ಎಂಬ ಐದು ಸಂಖ್ಯೆಗಳ ಮಾನಕ ವಿಚಲನೆ (standard deviation) ಎಷ್ಟು? (ಎರಡು ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ)

Ans
✗ 1. 6.25
✗ 2. 4.52
✓ 3. 5.66
✗ 4. 7.15

black

Q.100 ಹೆನ್ಲಿ ಪಾಸ್ಪೋರ್ಟ್ ಸೂಚ್ಯಂಕದ 2026 ರ ಆವೃತ್ತಿಯ ಪ್ರಕಾರ, ಈ ಕೆಳಗಿನವುಗಳಲ್ಲಿ ಯಾವ ದೇಶವು 192 ಸ್ಥಳಗಳಿಗೆ ವೀಸಾ-ಮುಕ್ತ ಪ್ರವೇಶದೊಂದಿಗೆ ವಿಶ್ವದ ಅತ್ಯಂತ ಶಕ್ತಿಶಾಲಿ ಪಾಸ್ಪೋರ್ಟ್ ಹೊಂದಿತ್ತು?

Ans

✗ 1. ದಕ್ಷಿಣ ಕೊರಿಯಾ

✓ 2. ಸಿಂಗಾಪುರ

✗ 3. ಯುನೈಟೆಡ್ ಅರಬ್ ಎಮಿರೇಟ್ಸ್

✗ 4. ಜಪಾನ್

"

Blackbook